RNI No: KARKAN/2014/54928

ಸಂಪಾದಕರು: ಎಸ್.ಕೆ.ಒಡೆಯರ್
ನೊಂದವರ ಧ್ವನಿ

ಉಪ ಸಂಪಾದಕರು: ಸುಚಿತ್ರ ಎಸ್.ಒಡೆಯರ್, (ಎಂ.ಬಿ.ಎ.)
www.sahayavani.com

# ಸಹಾಯ ವಾಣಿ


Editor; S.K.Wadeyar **SAHAYAVANI** Kannada Daily, ಕನ್ನಡ ದಿನಪತ್ರಿಕೆ

ಸಂಪುಟ: ೧೧. Vol:11. | ಸಂಚಿಕೆ: ೦೧. Issuse:01. | ದಿನಾಂಕ:೧೫-೦೨-೨೦೨೪. Date:15-02-2024. | ಗುರುವಾರ. Thursday. | ಪುಟ: ೪. Page: 4. | ರೂ: ೩-೦೦. Rs: 3-00.

Phone:08031212322 -- 9902543494.
e-mail;sahayavany@gmail.com

*ಬೆಂಗಳೂರು ನಗರ*ಬೆಂಗಳೂರು ಗ್ರಾಮಾಂತರ* ಕೋಲಾರ *ಹಾಸನ* ಚಿತ್ರದುರ್ಗ* ದಾವಣಗೆರೆ* ವಿಜಯನಗರ* ಬಳ್ಳಾರಿ* ರಾಯಚೂರು* ವಿಜಯಪುರ* ತುಮಕೂರು*ಚಿಕ್ಕಬಳ್ಳಾಪುರ*ರಾಮನಗರ*ಮೈಸೂರು*ಮಂಡ್ಯ*ಜಿಲ್ಲೆಗಳಲ್ಲಿ ಪ್ರಸಾರ ಹೊಂದಿದೆ*

## ಕರ್ನಾಟಕ ಸರ್ಕಾರ 'ವಿಶ್ವಗುರು ಬಸವಣ್ಣ ಸಾಂಸ್ಕೃತಿಕ ನಾಯಕ; ಎಂದು ಘೋಷಣೆ ಮಾಡಿರುವುದು ಅಭಿನಂದನಾರ್ಹ.;ಸಾಣೇಹಳ್ಳಿ ಶ್ರೀ




'ನಮ್ಮ ನಡಾವಳಿಗೆ ನಮ್ಮ ಪುರಾತರ ನುಡಿಯೆ ಇಷ್ಟವಯ್ಯಾ ಎನ್ನುವ ಶಿವಯೋಗಿ ಸಿದ್ಧರಾಮೇಶ್ವರ ವಚನದ ಸಾಲುಗಳು ವಚನಗಳ ಮಹತ್ವವನ್ನು ಮನಗಾಣಿಸುತ್ತವೆ. ಶರಣರು ಸನಾತನವಾದಿಗಳಲ್ಲ. ಅವರು ವೇದ, ಶಾಸ್ತ್ರ, ಪುರಾಣ, ಸ್ಮೃತಿಗಳ ಬದಲು ಪುರಾತರ ನುಡಿಗಡಣಕ್ಕೆ ಒತ್ತುಕೊಟ್ಟವರು. ಅವರ ಚಿಂತನೆಗಳು ಕಾಲಾತೀತ, ದೇಶಾತೀತ. ಅನುಭವ ಮಂಟಪ ವಿಶ್ವದ ಮೊಟ್ಟಮೊದಲ ಪಾರ್ಲಿಮೆಂಟ್. ಇಲ್ಲಿ ಜಾತಿ, ಮತ, ಲಿಂಗ, ವಯೋಭೇದವಿಲ್ಲದೆ ಸರ್ವರಿಗೂ ಸಮಾನ ಅವಕಾಶ ಕಲ್ಪಿಸಲಾಗಿತ್ತು. ಸಮಸಮಾಜದ ನಿರ್ಮಾಣ ಅವರ ಧ್ಯೇಯವಾಗಿತ್ತು. ಎಲ್ಲ ರೀತಿಯ ಮೌಢ್ಯಗಳನ್ನು ನಿರಾಕರಿಸಿ ವಿಚಾರ, ವಿವೇಕದ ನೆಲೆಯಲ್ಲಿ ಸತ್ಯದ ಸಾಕ್ಷಾತ್ಕಾರ ಮಾಡಿಕೊಂಡವರು. ಶ್ರೇಣೀಕೃತ ಸಮಾಜ ಶರಣರದಲ್ಲ. ಅವರದು ಕಾಯಕ ಪ್ರಧಾನ ಸಮಾಜ. ಸರ್ವಸಮಾನತೆಯ ಸಮಾಜ. ತಳಸಮುದಾಯದ ಜನರಲ್ಲಿ ಶರಣರು ಆತ್ಮವಿಶ್ವಾಸ ಬೆಳಸಿ ತಲೆಯೆತ್ತಿ ಬಾಳುವ ಅವಕಾಶ ಕಲ್ಪಿಸಿದರು.

ಸಮಾಜದಲ್ಲಿ ಧಾರ್ಮಿಕ, ನೈತಿಕ, ಸಾಮಾಜಿಕ ಜಾಗೃತಿಯನ್ನು ನೆಲೆಗೊಳಿಸಿದರು.ಇಂತಹ ಎಲ್ಲ ಬದಲಾವಣೆಗೆ ಕಾರಣರಾದವರು ಬಸವಣ್ಣನವರು. ಅಂಥವರನ್ನು ಕರ್ನಾಟಕ ಸರ್ಕಾರ 'ವಿಶ್ವಗುರು ಬಸವಣ್ಣ ಸಾಂಸ್ಕೃತಿಕ ನಾಯಕ; ಎಂದು ಘೋಷಣೆ ಮಾಡಿರುವುದು ಅಭಿನಂದನಾರ್ಹ.

ಸಾಮಾಜಿಕ ನ್ಯಾಯದ, ಜನಪರ ಚಳವಳಿಯ, ಎಲ್ಲರನ್ನೂ ಒಳಗೊಳ್ಳುವ ವಚನ ರಚನೆಯ ಬಸವಣ್ಣನವರ ಭಾವಚಿತ್ರದ ಕೆಳಗೆ 'ವಿಶ್ವಗುರು ಬಸವಣ್ಣ ಸಾಂಸ್ಕೃತಿಕ ನಾಯಕ ಎಂದು ಬರೆಸಿ ಫೆಬ್ರವರಿ ೧೭ರಂದು ಸರ್ಕಾರದ ಎಲ್ಲ ಕಚೇರಿಗಳಲ್ಲಿ ಮತ್ತು ಶಾಲಾ ಕಾಲೇಜುಗಳಲ್ಲಿ ಹಾಕಲು ಸರ್ಕಾರ ಆದೇಶ ಮಾಡಿರುವುದು ಸ್ವಾಗತಾರ್ಹ. ಅದಕ್ಕಾಗಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ಅವರ ಸಚಿವರನ್ನು ಅಭಿನಂದಿಸುತ್ತೇವೆ. ೧೭ರಂದು ಬಸವ ಜಯಂತಿ ಆಚರಿಸಿದಂತೆ ಮನೆ ಮನೆಯಲ್ಲೂ ಬಸವಣ್ಣನವರ ಭಾವಚಿತ್ರ ಹಾಕಿ ವಚನಗಳ ಪಠಣ ಮಾಡುವ ಸಂಕಲ್ಪವನ್ನು ಬಸವತತ್ವಪ್ರೇಮಿಗಳೆಲ್ಲರೂ ಮಾಡಬೇಕು. ನಾವು ನಮ್ಮ ಮಠದಲ್ಲಿ, ವಿದ್ಯಾರ್ಥಿ ನಿಲಯಗಳಲ್ಲಿ ೧೭ರಂದು ಮತ್ತೊಂದು ಬಸವ ಭಾವಚಿತ್ರವನ್ನು ಹಾಕಿ ಬಸವಣ್ಣನವರ ಸಂದೇಶಗಳ ಬಗ್ಗೆ ಚಿಂತನ ಮಂಥನ ಕಾರ್ಯಕ್ರಮ ಮಾಡಲಿದ್ದೇವೆ. ಅಷ್ಟೇ ಅಲ್ಲ 'ಮಾನವೀಯ ಸಮಾಜ ನಿರ್ಮಾಣದಲ್ಲಿ ಬಸವಣ್ಣನವರ ವಚನಗಳ ಪಾತ್ರ ಎನ್ನುವ ವಿಷಯದ ಮೇಲೆ ಓ ಎಲ್ ನಾಗಭೂಷಣ, ಬಸವರಾಜ ಸಾದರ, ಎಸ್ ಜಿ ಸಿದ್ಧರಾಮಯ್ಯ, ಬಸವಲಿಂಗಪ್ಪ, ಚಂದ್ರಶೇಖರಯ್ಯ, ಚಂದ್ರಶೇಖರ ತಾಳ್ಯ ಮತ್ತಿತರರು ೧೭-೧೮ ರಂದು ಸಂವಾದ ನಡೆಸಲಿದ್ದಾರೆ ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಇಂದು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

## "ನಮ್ಮ ತೆರಿಗೆ ನಮ್ಮ ಹಕ್ಕು" ಕನ್ನಡಿಗರ ಅಭಿಯಾನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ



ಎಕ್ಸ್ (ಟ್ವಿಟರ್) ಸ್ಪೇಸ್ ನಲ್ಲಿ ಇಂದು ನಡೆದ "ನಮ್ಮ ತೆರಿಗೆ ನಮ್ಮ ಹಕ್ಕು" ಕನ್ನಡಿಗರ ಅಭಿಯಾನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಾರ್ವಜನಿಕರೊಂದಿಗೆ ಸಂವಾದ ನಡೆಸಿದರು.

ನಾವು ಪ್ರಜಾಪ್ರಭುತ್ವ ಮತ್ತು ಒಕ್ಕೂಟ ವ್ಯವಸ್ಥೆಯನ್ನು ಒಪ್ಪಿಕೊಂಡ ಮೇಲೆ ಚೀನಾ ಮಾದರಿ ಏಕಸ್ವಾಮ್ಯವನ್ನು ಸಹಿಸಲು , ಅಮೆರಿಕದ ಅಧ್ಯಕ್ಷೀಯ ಮಾದರಿ ಆಡಳಿತವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಅತಿ ಹೆಚ್ಚು ತೆರಿಗೆ ಕಟ್ಟುವ ನಮ್ಮ ರಾಜ್ಯಕ್ಕೆ ಅನ್ಯಾಯ ಆಗದಂತೆ ತಡೆಯಲು ಸಂವಿಧಾನ ತಿದ್ದುಪಡಿ ಮಾಡಿ ಸೆಸ್ ಮತ್ತು ಸರ್ ಚಾರ್ಜ್ ನಲ್ಲೂ ನಮಗೆ ಪಾಲು ಕೊಡಬೇಕು

ರಾಜ್ಯಗಳ ಅಭಿವೃದ್ಧಿ ಆಗದೆ ದೇಶದ ಅಭಿವೃದ್ಧಿ ಹೇಗೆ ಸಾಧ್ಯ? ರಾಜ್ಯಗಳು ದುರ್ಬಲ ಆದರೆ ದೇಶ ದುರ್ಬಲ ಆಗುತ್ತದೆ. ರಾಜ್ಯಗಳು ಸುಭದ್ರ ಆಗಿದ್ದರೆ ದೇಶವೂ ಸುಭದ್ರ ಆಗುತ್ತದೆ ಎಂದು ಸಿ.ಎಂ.ಹೇಳಿದರು.

## ಸಂವಿಧಾನ ಜಾಗೃತಿ ಜಾಥ: ವಿವಿಧ ಗ್ರಾಮ ಪಂಚಾಯತಿಯಿಂದ ಅದ್ದೂರಿ ಸ್ವಾಗತ

ರಾಯಚೂರು,ಫೆ.೧೪:- ಸಂವಿಧಾನ ಜಾಗೃತಿ ಜಾಥದ ಅಂಗವಾಗಿ ಫೆ.೧೩ರಂದು ನಾಗರಹಾಳ ಗ್ರಾಮ ಪಂಚಾಯತಿಯಲ್ಲಿ ಅದ್ದೂರಿಯಾಗಿ ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಂಡು ನಂತರ ಫೆ.೧೪ರಂದು ಬಯ್ಯಾಪೂರ ಗ್ರಾಮ ಪಂಚಾಯತಿಗೆ ಸಂವಿಧಾನ ಜಾಗೃತಿ ಜಾಥವನ್ನು ಹಸ್ತಾಂತರಿಸಲಾಯಿತು. ಬಯ್ಯಾಪೂರ ಗ್ರಾಮ ಪಂಚಾಯತಿ ಅಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳ ಮುಖಂಡರು, ಗ್ರಾಮದ ಮಹಿಳೆಯರು ಶಾಲಾ ಮಕ್ಕಳಿಂದ ಕಳಸ ಕುಂಭಗಳನ್ನೊತ್ತು, ಸಂವಿಧಾನಪರ ಘೋಷಣೆಗಳನ್ನು ಕೂಗುತ್ತಾ ಅದ್ದೂರಿಯಾಗಿ ಜಾಥವನ್ನು ಸ್ವಾಗತಿಸಿದರು.

ಬಯ್ಯಾಪೂರ ಗ್ರಾಮ ಪಂಚಾಯತಿಯಲ್ಲಿ ಸಂವಿಧಾನ ಜಾಗೃತಿ ಜಾಥ ಮೆರವಣಿಗೆ ಮುಗಿಸಿ ಉಪ್ಪಾರನ ನಂದಿಹಾಳ, ಆಮದಿಹಾಳ, ಬನ್ನಿಗೊಳ, ಹೂನೂರು ಗ್ರಾಮ ಪಂಚಾಯತಿಯಲ್ಲಿ ಸಂಚಾರವನ್ನು ಮುಂದುವರೆಸಲಾಯಿತು. ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲಿ ಸಂವಿಧಾನ ಜಾಗೃತಿ ಜಾಥದ ಸ್ಥಬ್ಧ ಚಿತ್ರಕ್ಕೆ ಮಾರ್ಲಾಣೆ ಮಾಡುವುದರ ಮೂಲಕ ವಿಶೇಷವಾಗಿ ಸ್ವಾಗತಿಸಲಾಯಿತು.



ಹೂನೂರು ಗ್ರಾಮ ಪಂಚಾಯತಿಯಲ್ಲಿ ಜಾಥದ ಮೆರವಣಿಗೆ ಮಾಡಿ ಹಟ್ಟಿ ಪಟ್ಟಣಕ್ಕೆ ಆಗಮಿಸಿದ ಸಂವಿಧಾನ ಜಾಗೃತಿ ಜಾಥವನ್ನು ಮುದಗಲ್ ಪಟ್ಟಣದಲ್ಲಿ ಅತ್ಯಂತ ಅದ್ದೂರಿಯಿಂದ ಸ್ವಾಗತಿಸಿ, ಅಧಿಕಾರಿಗಳು, ಮುಖಂಡರು, ಜನಪ್ರತಿನಿಧಿಗಳು, ವಿವಿಧ ಸಂಘ ಸಂಸ್ಥೆಗಳ ಮುಖಂಡರು ಹಾಗೂ ಶಾಲಾ ಮಕ್ಕಳು, ಶಿಕ್ಷಕರು

ಅಂಗನವಾಡಿ, ಆಶಾ ಕಾರ್ಯಕರ್ತೆಯರು ಸ್ಥಬ್ಧಚಿತ್ರದಲ್ಲಿರುವ ಡಾ.ಬಿ.ಆರ್ ಅಂಬೇಡ್ಕರ್ ಪುತ್ಥಳಿ, ಭಾವಚಿತ್ರಕ್ಕೆ ಹಾಗೂ ಸಂವಿಧಾನ ಪೀಠಿಕೆಗೆ ಪೂಜೆ ಸಲ್ಲಿಸಿ, ಸಂವಿಧಾನ ಪೀಠಿಕೆ ವಾಚನ ಮಾಡಿದರು. ಮುದಗಲ್ ಪಟ್ಟಣದಲ್ಲಿ ಸಂಜೆ ಎಲ್.ಇ.ಡಿ ಪರದೆಯ ಮೂಲಕ ಸಂವಿಧಾನದ ಕುರಿತು ವಿಡಿಯೋ ಕ್ಲಿಪಿಂಗ್‌ಗಳನ್ನು ಪ್ರದರ್ಶಿಸಲಾಯಿತು. ವಿವಿಧ ಸ್ಪರ್ಧೆಗಳ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು. ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು

## ಬೆಂ.ನಗರ ಜಿಲ್ಲಾದ್ಯಂತ ನಿಷೇಧಾಜ್ಞೆ ಜಾರಿ

ಬೆಂಗಳೂರು ನಗರ ಜಿಲ್ಲೆ, ಫೆಬ್ರವರಿ ೧೪ : ಕರ್ನಾಟಕ ವಿಧಾನ ಪರಿಷತ್ತಿನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪಚುನಾವಣೆ-೨೦೨೪ರ ನಿಮಿತ್ತ ದಿನಾಂಕ ೧೪.೦೨.೨೦೨೪ ರ ಸಂಜೆ ೪.೦೦ ಗಂಟೆಯಿಂದ ದಿನಾಂಕ ೧೬-೦೨-೨೦೨೪ರ ಮಧ್ಯರಾತ್ರಿ ೧೨.೦೦ ಗಂಟೆಯವರೆಗೆ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಯಾವುದೇ ಅಹಿತರ ಘಟನೆಗಳು ಹಾಗೂ ಸಾರ್ವಜನಿಕ ಆಸ್ತಿಯನ್ನು ಸಂರಕ್ಷಿಸುವ ನಟ್ಟಿನಲ್ಲಿ ದಂಡ ಪ್ರಕ್ರಿಯ ಸಂಹಿತೆ,೧೯೭೩ ಕಲಂ ೧೪೪ ನಿಷೇಧಾಜ್ಞೆ ಜಾರಿಗೊಳಿಸಿ ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾದಂಡಾಧಿಕಾರಿಗಳಾದ ಕೆ.ಎ.ದಯಾನಂದ ರವರು ಆದೇಶಿಸಿದ್ದಾರೆ.

## ಪತ್ರಿಕಾರಂಗವು ಸಮಾಜದ ಅಂಕುಡೊಂಕನ್ನು ತಿದ್ದುವುದರೊಂದಿಗೆ ಉತ್ತಮ ಕಾರ್ಯಸಾಧಕರನ್ನು ಗುರ್ತಿಸಿ ಗೌರವಿಸುವುದು ಶ್ಲಾಘನೀಯ

## ೨೦೨೩ರ ವರ್ಷದ ವ್ಯಕ್ತಿ ಪ್ರಶಸ್ತಿ ಸ್ವೀಕರಿಸಿದ ಡಾ.ಶಶಿಕುಮಾರ್‌ರ ಮನದಾಳ



ದಾವಣಗೆರೆ-ಇದೊಂದು ಭಾವುಕ ಕಾರ್ಯಕ್ರಮ. ಸಾಧನೆಯನ್ನು ಗುರ್ತಿಸಿ ಸನ್ಮಾನಿಸುವುದರಿಂದ ಅವರಿಗೆ ಇನ್ನಷ್ಟು ಉತ್ತೇಜನ ದೊರೆಯುವಂತಹ ಟಾನಿಕ್‌ನಂತಾಗುವುದು. ಸಾಧಕರಿಗೆ ಪ್ರೋತ್ಸಾಹದಾಯಕವೆನಿಸುತ್ತದೆ ಎಂದು ಡಾ.ಶಶಿಕುಮಾರ್ ವಿ.ಮೆಹರ್ವಾಡೆಯವರು ತಮ್ಮ ಮನದಾಳವನ್ನುವ್ಯಕ್ತಪಡಿಸಿದರು.

ಜಿಲ್ಲೆ ಸಮಾಚಾರ ದಿನಪತ್ರಿಕೆ ಬಳಗವು ಫೆ.೧೨ರಂದು ನಗರದ ಶಿವಯೋಗಾಶ್ರಮದ ಆವರಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ೨೦೨೩ರ ವರ್ಷದ ವ್ಯಕ್ತಿ ಪ್ರಶಸ್ತಿಯನ್ನು ಸ್ವೀಕರಿಸಿ ಅವರು ಮಾತನಾಡಿದರು.

ಕಳೆದ ೧೬ ವರ್ಷಗಳಿಂದ ನಿರಂತರವಾಗಿ ಬೇರೆ ಬೇರೆ ಕ್ಷೇತ್ರದ ಸಾಧಕರನ್ನು ಗುರ್ತಿಸಿ, ಗೌರವದ ಸನ್ಮಾನ ನೀಡುವ ಕಾರ್ಯವನ್ನು ಮುಂದುವರಿಸಿರುವ 'ಜಿಲ್ಲೆ ಸಮಾಚಾರ' ಪತ್ರಿಕಾ ಬಳಗದ ಕಾರ್ಯ ಪ್ರಶಂಸನೀಯವಾದುದು. ಪತ್ರಿಕೆಗಳು ಸಮಾಜದ ಅಂಕುಡೊಂಕುಗಳ ಬಗ್ಗೆ ಸುದ್ದಿ ಮಾಡುವುದರ ಜೊತೆಗೆ ಸಮಾಜದ ಹಿತಕ್ಕೆ ಶ್ರಮಿಸುವವರ ಬಗ್ಗೆ ಪರಾಮರ್ಶಿಸಿ, ಆಯ್ಕೆ ಮಾಡುವುದರೊಂದಿಗೆ ಸನ್ಮಾನದ ಗೌರವ ನೀಡುವಂತಹ 'ಪಾಜಿಟಿವ್ ಜರ್ನಲಿಸಂ'ನ್ನು ಕೂಡ ರೂಢಿಸಿಕೊಳ್ಳಬೇಕಾದ ಅವಶ್ಯತೆ ಇದೆ. ಸನ್ಮಾನಗಳು ನಮ್ಮ ಜವಾಬ್ದಾರಿಯನ್ನು ಹೆಚ್ಚಿಸುತ್ತವೆ. ಇದು ಒಂದು ರೀತಿಯ ಟಾನಿಕ್ ಇದ್ದಂತೆ. ಭವಿಷ್ಯದಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಪರ ಕೆಲಸಗಳಲ್ಲಿ ತೊಡಗಲು ಪ್ರೇರಣೆ ದೊರೆಯುತ್ತದೆ ಎಂದು ಶಶಿಕುಮಾರ್ ಹೇಳಿ ಪತ್ರಿಕಾ ಬಳಗದವರ ಈ ವೈಶಿಷ್ಟಪೂರ್ಣ ಕಾರ್ಯಕ್ರಮ ಇಡೀ ರಾಜ್ಯಕ್ಕೆ ಮಾದರಿಯಾಗಲಿ ಎಂದು ಆಶಿಸಿದರು.

ಮೊದಲಿಗೆ ಶ್ರೀಮತಿ ನೇತ್ರಾ ಪ್ರಾರ್ಥನೆಯನ್ನು ಹಾಡಿದರು. ಪತ್ರಿಕಾ ಬಳಗದ ಅಧ್ಯಕ್ಷೆ ಶ್ರೀಮತಿ ಸತ್ಯಭಾಮ ಮಂಜುನಾಥ್ ಸ್ವಾಗತಿಸಿದರು. ಚಟುವಟಿಕೆ ಕುರಿತು ಬಳಗದ ಉಪಾಧ್ಯಕ್ಷ ಕೆ.ಎನ್.ಜಯಪ್ರಕಾಶ್ ಮಾತನಾಡಿದರು. ಸಂಸ್ಥಾಪಕ ವಿ.ಹನುಮಂತಪ್ಪ ಬಳಗದ ಕಾರ್ಯಕ್ರಮಗಳಿಗೆ ಸಾರ್ವಜನಿಕರು ಮತ್ತು ಗಣ್ಯರಿಂದ ಹೆಚ್ಚಿನ ಉತ್ತೇಜನ ದೊರೆಯುತ್ತಿದೆ ಎಂದರು.

ದೀಪ ಬೆಳಗಿಸಿ ಉದ್ಘಾಟಿಸಿದ ಕಾರ್ಯಕ್ರಮವನ್ನು ಸಂಸದರಾದ ಜಿ.ಎಂ.ಸಿದ್ದೇಶ್ವರ್, ಜಗಳೂರು ಮಾಜಿ ಶಾಸಕ ಎಸ್.ವಿ.ರಾಮಚಂದ್ರ ನಡೆಸಿಕೊಟ್ಟರು. ಮೈಸೂರಿನ ವಿಶ್ರಾಂತ ಪ್ರೊ. ಎಚ್.ಎಸ್.ಹರಿಶಂಕರ್ ಮಾತನಾಡಿ ಜಿಲ್ಲಾಮಟ್ಟದ ಪತ್ರಿಕೆಯೊಂದು ಇಂತಹ ವೈಶಿಷ್ಟ್ಯದ ಕಾರ್ಯಕ್ರಮ ಮಾಡುವ ಮೂಲಕ ಎಲ್ಲರ ಮೆಚ್ಚುಗೆ ಪಾತ್ರವಾಗಿರುವುದು ಹೆಮ್ಮೆಯ ಸಂಗತಿ ಎಂದರು.

ಹಿರಿಯ ನ್ಯಾಯವಾದಿ ರಾಮಚಂದ್ರ ಕಲಾಲ್ ಮಾತನಾಡುತ್ತಾ ಸಮಾಜದಲ್ಲಿನ ನಿಷ್ಠಾವಂತರನ್ನು ಗುರ್ತಿಸುವ ಕೆಲಸ ಒಂದು ಪತ್ರಿಕೆಯಿಂದ ಆಗುತ್ತಿರುವುದು ಪ್ರಶಂಸನೀಯವೆನಸಿದೆ. ಶ್ರೀಮಂತಿಕೆ ಹೆಚ್ಚಿದಂತೆ ರಾಜಕೀಯ ಜೊತೆಯಾಗುತ್ತದೆ. ಉತ್ತಮವಾಗಿ ಸಾಧನೆ ಮಾಡುವವರನ್ನು ಗೌರವಿಸುವಂತಹುದು ನಮ್ಮ ಜವಾಬ್ದಾರಿಯೂ ಹೌದು ಎಂದರು.

ಶ್ರೀ ಬಸವಪ್ರಭು ಸ್ವಾಮೀಜಿ ಆಶೀರ್ವಚನ ನೀಡಿ ಮಾನವನ ಜೀವನದಲ್ಲಿ ಶಾಶ್ವತವಾಗಿ ಉಳಿಯುವುದೆಂದರೆ ಸತ್ಕಾರ್ಯ. ಎಲ್ಲಾ ದಾರ್ಶನಕರ ಬದುಕು ನಮಗೆ ಪ್ರೇರಣೆ ಆಗಬೇಕು.ವ್ಯಕ್ತಿಗೆ ಸಾವು ಇದೆ. ವ್ಯಕ್ತಿತ್ವಕ್ಕೆ ಸಾವಿಲ್ಲ. ಸಮಾಜಕ್ಕೆ ಒಳಿತಾಗುವಂತಹ ಕಾರ್ಯಗಳನ್ನು ಮಾಡುತ್ತಿರುವ 'ತಪೋವನ'ದ ಶಶಿಕುಮಾರ್ ಇಂದಿನ ಯುವ ಪೀಳಿಗೆಗೆ ಅನುಕರಣೀಯರೆನಿಸುತ್ತಾರೆ. ಮಾನವೀಯತೆಯನ್ನು ರೂಢಿಸಿಕೊಂಡು ಸಮಾಜದ ಹಿತಕ್ಕೆ ಶ್ರಮಿಸುವಂತಹ ಇಂತಹವರನ್ನು ಸನ್ಮಾನಿಸುತ್ತಿರುವ ಪತ್ರಿಕಾ ಬಳಗದ ಕಾರ್ಯಕ್ಕೆ ಎಲ್ಲರೂ ಅಭಿನಂದಿಸೋಣ ಎಂದರು.

'ವರ್ಷದ ವ್ಯಕ್ತಿ' ಪ್ರಶಸ್ತಿಯನ್ನು ಪ್ರದಾನಸಿದ ನಂತರ ವಿಶ್ರಾಂತ ಲೋಕಾಯುಕ್ತರಾದ ಗೌರವಾನ್ವಿತ ಸಂತೋಷ್ ಹೆಗಡೆಯವರು ಮಾತನಾಡಿ ಇಂದು ಸಮಾಜವನ್ನು ದುರಾಸೆ ಎಂಬ ಮದ್ದೇ ಇಲ್ಲದ ರೋಗವು ಪೆಡಂಭೂತವಾಗಿ ಕಾಡುತ್ತಿದೆ. ತೃಪ್ತಿಯನ್ನು ರೂಢಿಸಿಕೊಂಡಾದ ದುರಾಸೆ ದೂರವಾಗುತ್ತದೆ. ಭ್ರಷ್ಟಾಚಾರಿಗಳನ್ನು ಕಠಿಣವಾಗಿ ಕ್ರಮ ಅನುಸರಿಸುವ ಕಾನೂನು ಜಾರಿಯಾಗಬೇಕಾಗಿದೆ. ಯುವ ಜನಾಂಗವು ಸನ್ಮಾರ್ಗದಲ್ಲಿ ನಡೆದು ದೇಶದ ಕೀರ್ತಿ ಪಸರಿಸುವಂತಾಗಲು ಸಂಕಲ್ಪ ಮಾಡಬೇಕಾಗಿದೆ ಎಂದು ಅಭಿಪ್ರಾಯಪಟ್ಟರು. ಬಳಗದ ಸಹ ಕಾರ್ಯದರ್ಶಿ ಶ್ರೀಮತಿ ಭಾರತಿ ಸನ್ಮಾನ ಪತ್ರ ಓದಿದರು. ಬಳಗದ ಗುರುಬಸವರಾಜ ವಂದಾನರ್ಪಣೆ ಮಾಡಿದರು. ರಾಘವೇಂದ್ರನಾಯರಿ ಕಿರುಪರಿಚಯ ಮಾಡಿದರು. ಪತ್ರಿಕಾ ಸಂಪಾದಕ ಎಚ್.ವೆಂಕಟೇಶ್,ಮಹಾಂತೇಶ್‌ವಿ.ಒಣರೊಟ್ಟಿ ಸೇರಿದಂತೆ ಪತ್ರಿಕಾ ಬಳಗದ ಸದಸ್ಯರು, ಹಿತೈಷಿಗಳು ಹಾಜರಿದ್ದು, ಕಾರ್ಯಕ್ರಮದ ಯಶಸ್ಸನ್ನು ಸಾಕ್ಷೀಕರಿಸಿದರು.

ಈ ಸಂದರ್ಭದಲ್ಲಿ ಶಶಿಕುಮಾರ್ ಪತ್ನಿ ಶ್ರೀಮತಿ ಜಯಲಕ್ಷ್ಮಿ ಹಾಗೂ ಕುಟುಂಬವರ್ಗದವರು ಉಪಸ್ಥಿತರಿದ್ದರು. ಕೊನೆಯಲ್ಲಿ ವಿವಿಧ ಸಂಘ-ಸಂಸ್ಥೆಗಳವರು, ಹಿತೈಷಿಗಳು ಪ್ರಶಸ್ತಿ ಪುರಸ್ಕೃತ ದಂಪತಿಗೆ ಶಾಲು, ಹೂಮಾಲೆಯೊಂದಿಗೆ ಸನ್ಮಾನಿಸಿ ಸಂಭ್ರಮಿಸಿದರು.

## ಶ್ರೀಮತಿ// ಎ.ಸಿ.ಶಶಿಕಲಾ ಶಂಕರಮೂರ್ತಿ. ಶಿಕ್ಷಕಿ,ಸಾಹಿತಿ,ಪ್ರಕಾಶಕಿ ದಾವಣಗೆರೆ ಇವರ ಅನುಭಾವ ಲೇಖನ

ಒಳಿತು ಮಾಡು ಮನುಷ್ಯಾ,,,,,,ನೀ ಇರೋದು ಮೂರು ದಿವಸ!

ಬೆಂಗಳೂರು ಉತ್ತರವಲಯ ತಾಲ್ಲೂಕಿನ ಜಾಲಹಳ್ಳಿ ಕರ್ನಾಟಕ ಪಬ್ಲಿಕ್ ಸ್ಕೂಲ್ ನಲ್ಲಿ ಭಾರತದ NDRF ನ 10 ಸಿ । RRC ಬೆಟಾಲಿಯನ್ ವತಿಯಿಂದ ನಡೆದ ಜೀವರಕ್ಷಣಾ ತರಬೇತಿ ಗಾಥೆ:

**ವಿಪತ್ತು ಪ್ರತಿಕ್ರಿಯೆಯಾಗಿ ಭಾರತದ ದೊಡ್ಡ ಭರವಸೆಯಾಗಿ ಉಳಿದಿರುವ NDRFಈ( ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ) ಕುರಿತು- ನುಡಿ ನಮನ.**

ಅಂದು ದಿನಾಂಕ:೨೯-೧-೨೦೨೪ ಜಾಲಹಳ್ಳಿ ಕರ್ನಾಟಕ ಪಬ್ಲಿಕ್ ಸ್ಕೂಲ್ ನ ಸುಮಾರು ೧೯೦೦ ಮಕ್ಕಳು ವ್ಯಾಸಂಗ ಮಾಡುವ ಶಾಲಾ ಆವರಣದೊಳಗೆ ಪ್ರಾರ್ಥನಾ ಸಮಯದಲ್ಲಿ ಅನಿರೀಕ್ಷಿತವಾಗಿ ಸಿಪಾಯಿಗಳಿರುವ ಒಂದು ಜೀಪ್ ಬಂದು ನಿಂತಿತು! ಜೀಪಿನಿಂದ ಐದಾರು ಜನ ಸಿಪಾಯಿಗಳು ಇಳಿದು ಕೇಳಿಬರುತ್ತಿದ್ದ ರಾಷ್ಟ್ರಗೀತೆಗೆ ಸಲ್ಯೂಟ್ ಮಾಡಿ ಗೌರವದಿಂದ ತಲೆ ಎತ್ತಿ ನಿಂತರು! ಪ್ರಾರ್ಥನೆ ಮುಗಿದ ನಂತರ ಶಾಲಾ ಉಪಪ್ರಾಂಶುಪಾಲರಾದ. ಶ್ರೀ. ಗೋಪಾಲಕೃಷ್ಣರವರು- ಪ್ರಾಂಶುಪಾಲರಾದ ಶ್ರೀ ಜಯರಾಮ್, ಪ್ರಾಥಮಿಕ ಶಾಲಾ ವಿಭಾಗದ ಮುಖ್ಯ ಶಿಕ್ಷಕರಾದ- ಶ್ರೀ ಗೋವಿಂದರಾಜು ಹಾಗೂ ಶಾಲಾ ಕಾಳಜಿಗಾಗಿ ಪ್ರಾರ್ಥನೆಯ ಸಮಯದಿಂದ ಸಂಜೆ ಶಾಲೆ ಬಾಗಿಲು ಮುಚ್ಚುವ ತನಕ ಬದ್ಧತೆಯಿಂದ ಸಿಪಾಯಿಯಂತೆ ಗಸ್ತು ತಿರುಗುತ್ತಾ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಶ್ರಮಿಸುತ್ತಲೇ ಬಂದಿರುವ ಶಾಲಾ ಎಸ್ ಡಿ ಎಂ ಸಿ - ಗೌರವಾಧ್ಯಕ್ಷರಾದ ತಿಮ್ಮರಾಯಪ್ಪ ಇವರ ಜೊತೆ ಜೀಪಿನ ಬಳಿ ಹೋಗಿ ವಿಚಾರಿಸಲು,,,ಅವರು ಭಾರತದ NDRFಈ ಹತ್ತನೇ ಬೆಟಾಲಿಯನ್ ಯಲಹಂಕದ ಸಿ\ ಆರ್ ಆರ್ ಸಿ ಯ ಸಿಬ್ಬಂದಿ- ಶ್ರೀ. ಶಾಂತಿ ಲಾಲ್ ಜಾಡಿಯಾ ಇನ್ಸ್ ಪೆಕ್ಟರ್ ಆಫ್- ಸಿ\ ೧೦. ತ್ NDRFಈ ಹಾಗೂ ಹೆಡ್ ಕಾನ್ಸ್ಟೆಬಲ್ ಗಳಾದ ಶ್ರೀಕಾಂತ್ ಜೀವನಗೌಡ್ರ, ಶ್ರೀ ಎಂ.ಎಸ್.ಮಠಪತಿ ಹಾಗೂ ಮತ್ತು ಕಾನ್ಸ್ಟೆಬಲ್ ಗಳಾದ ಸೊನೂಪ , ಹನುಮಂತಪ್ಪ ಮತ್ತಿತರರು ಶಾಲಾ ವಿದ್ಯಾರ್ಥಿಗಳಿಗೆ,, "ಅಪತ್ತು ವಿಪತ್ತು ಶಾಲೆಗಳಲ್ಲಿ ಸಂಭವಿಸಿದರೆ ಮಕ್ಕಳು ತಮ್ಮನ್ನು ತಾವು ಹೇಗೆ ರಕ್ಷಣೆ ಮಾಡಿಕೊಳ್ಳಬೇಕು?" ಎಂಬುದರ ಬಗ್ಗೆ ತರಬೇತಿ ನೀಡಲು ಬಂದಿರುವುದನ್ನು ತಿಳಿದು ಬಹಳ ಸಂತೋಷಪಟ್ಟು ತಡಮಾಡದೆ ಅವರಿಗೆ ಹತ್ತು ನಿಮಿಷಗಳಲ್ಲಿ ವೇದಿಕೆ ವ್ಯವಸ್ಥೆ ಮಾಡಿ ಕೊಟ್ಟೇಬಿಟ್ಟರು!

ಪರೀಕ್ಷಾ ಸಿದ್ಧತೆ ಮಕ್ಕಳ ಅಭ್ಯಾಸ ಗಮನದ ಸಮಯದಲ್ಲಿ ಇದೇನಪ್ಪಾ ಕಾರ್ಯಕ್ರಮ!? ಸಮಯ ವ್ಯರ್ಥ ಆಗತ್" ನನ್ನ ಪೀರಿಯಡ್ ಹೋಗತ್" ಅಂತ ತಳಮಳ ಪಡುತ್ತಿದ್ದ ಶಿಕ್ಷಕಿಯರ ಮನಸ್ಸುಗಳನ್ನು ಮಾನವತೆಯ ರಸದಲ್ಲಿ ಮೀಯಿಸಿ ತಣ್ಣಗಾಗುವಂತೆ ಮಾಡಿದ ಕರುಣಾಪೂರ್ಣ ಜೀವರಕ್ಷಾ ತರಬೇತಿ ಹಾಗೂ ಆವೇಶಭರಿತ ಮನಸ್ಸುಗಳ ಅಪ್ರಜ್ಞೆಯ ಓಟಕೆ ಲಗಾಮು ಹಾಕುವಂತಹ ಎಚ್ಚರಿಕೆಯ ಜಾಗೃತಿ ಜೀವಗಾಥೆ ಅದಾಗಿತ್ತು ಎಂಬುದು ಸತ್ಯ ಸಂಗತಿ.

ಜಾಲಹಳ್ಳಿ ಕ್ರಾಸ್ ನಂತಹ ಹಿರಿದಾದ ಟ್ರಾಫಿಕ್ ನಲ್ಲಿ ಸಿಗ್ನಲ್ ಕೂಡ ಗಮನಿಸದೆ ಅವಸರವಾಗಿ ಒಬ್ಬ ತಾಯಿ ತನ್ನ ಮಗಳ ಜೊತೆ ಜೀವ ಲೆಕ್ಕಿಸದೆ ಓಡುತ್ತಿದ್ದಳು,,,,,,"ಅಯ್ಯೋ! ಅವರಿಗೆ ಯಾವ ತೊಂದರೆ ಆಗಿದೆಯೋ,,,!?"ಎಂದು ನಾನು ಕೂಡ ಅಷ್ಟೇ ವೇಗವಾಗಿ ಅವರನ್ನು ಹಿಂಬಾಲಿಸಿದೆ,,,! ಹಿಂದೆಯೇ ಹೋಗಿ ಅವರ ಮನೆಯ ಬಾಗಿಲು ಬಡಿದು ಏನಾಯ್ತು!? ನೀವು ಯಾಕೆ ಅಂತಹ ಅಪಘಾತಕಾರಿ ಟ್ರಾಫಿಕ್ ನಲ್ಲೂ ಸಿಗ್ನಲ್ ಕೂಡ ಗಮನಿಸದೆ ಓಡಿ ಬಂದಿರಿ!? ನಮ್ಮಿಂದ ಏನಾದರೂ ಸಹಾಯ ಬೇಕೇ!? ಎಂದು ಕೇಳಿದರೆ ಆ ತಾಯಿ ಅಯ್ಯೋ ಏನೂ ಆಗಿಲ್ಲ! ನಾವು ನಿತ್ಯ ನೋಡುತ್ತಿದ್ದ ಟಿವಿ ಸೀರಿಯಲ್ ಸಮಯ ಆಗಿತ್ತು! ಅದು ಎಲ್ಲಿ ಮುಗಿದು ಬಿಡುತ್ತೋ ಅಂತ ಹಾಗೆ ವೇಗವಾಗಿ ಬಂದೆವು ಎಂದಳು! ಕೇಳಿದ ನಾವು ವಿಪತ್ತು ನಿವಾರಕ ಸಿಬ್ಬಂದಿ ಸ್ತಬ್ದರಾಗಿಬಿಟ್ಟೆವು! ಮಕ್ಕಳೇ, ಮತ್ತೊಂದು ಘಟನೆ ಹೋಮ್ ವರ್ಕ್ ಮಾಡಿಲ್ಲ ಎಂದು ಶಿಕ್ಷಕರು ಬೈಯ್ತಾರಂತ ಶಾಲೆಗೆ ಚಕ್ಕರ್ ಹಾಕಿ, ಹತ್ತಿರದ ಒಂದು ಕೆರೆಯ ಬಳಿ ಆಡಲು ಹೋದಾಗ, ಒಬ್ಬ ಕಾಲು ಜಾರಿ ಕೆರೆಗೆ ಬಿದ್ದ ಅವನನ್ನು ಉಳಿಸಲು ಈಜು ಬಾರದ ಉಳಿದಿಬ್ಬರು ವಿದ್ಯಾರ್ಥಿಗಳು ಒಬ್ಬರನ್ನು ಉಳಿಸಲು ಒಬ್ಬರು ಹೋಗಿ ಮುಳುಗಿ ಸತ್ತೇ ಹೋದರು!

ಈ ರೀತಿಯ ಆಡಂಬರದ ಅಪೇಕ್ಷೆ, ಆಕರ್ಷಣೆ, ಕುತೂಹಲ, ಮೋಹ,ಹೆದರಿಕೆ ಅಥವಾ ಮತ್ತಿತರ ಯಾವುದೇ ಆವೇಶದ ವೇಗದ ಓಟ ; ಅವಿವೇಕದ ಅಪ್ರಜ್ಞೆಯ ನಡೆ ಜೀವಕ್ಕೆ ಕುತ್ತು ಇಂತಹದ್ದನ್ನು ಎಂದೂ ಯಾವುದೇ ವಿಷಯಕ್ಕೂ ಯಾವುದೇ ತರಹಕ್ಕೂ ಸಂಚಲನಾ ನಿಯಮ ಮೀರಿ ಬಾಳಿನಾ ಎಚ್ಚರಿಕೆ ಮೀರಿ ನಡೆಯಲೇಬೇಡಿ ,,,,,ಎಂದು ತರಬೇತಿಗೆ, ಜೀವಂತ ಘಟನೆಯ ಪೀಠಿಕೆಯನ್ನು ಮನಕಲಕುವಂತೆ ಹಾಕಿ, ನಾಂದಿ ಹಾಡಿದ ಎನ್ ಡಿ ಆರ್ ಎಫ್ ನ ಹೆಡ್ ಕಾನ್ಸ್ಟೇಬಲ್ ಶ್ರೀಕಾಂತ ಜೀವನಗೌಡ್ರ ಅವರು ಶಾಲಾ ಮಕ್ಕಳಿಗೆ ಇವೆಲ್ಲಾ ಮಾನವನ ಅವಿವೇಕ ಅಪ್ರಜೆಯಿಂದಾಗುವ ಅನಾಹುತಗಳು ಮಕ್ಕಳೇ.ಆದರೆ ನೈಸರ್ಗಿಕವಾಗಿ ಯಾವುದಾದರೂ ಆಪತ್ತು ವಿಪತ್ತು, ಶಾಲೆ ಅಥವಾ ಬೇರೆ ಬೇರೆ ಕಡೆಗಳಲ್ಲಿ ಸಂಭವಿಸಿದರೆ; ಭೂಕಂಪ,ಸಿಡಿಲು ಗುಡುಗು,ಬಿರುಗಾಳಿ,ಪ್ರವಾಹ ಸನ್ನಿವೇಶಗಳು ಅನರೀಕ್ಷಿತ ಒದಗಿದರೆ ಆಗ ಮಕ್ಕಳಾದ ನೀವು ಹೆದರದೆ ಹೇಗೆ ಧೈರ್ಯದಿಂದ ನಿಮ್ಮನ್ನು ನೀವು ರಕ್ಷಣೆ ಮಾಡಿಕೊಳ್ಳಬಹುದು? ಇತರರನ್ನು ರಕ್ಷಿಸಬಹುದು ಎಂಬುದನ್ನು ನಾವು ತಿಳಿಸುತ್ತೇವೆ ಎಂದು,ಆ ಬಗ್ಗೆ ಪ್ರಾತ್ಯಕ್ಷಿಕತಾ ತರಬೇತಿಯನ್ನು ಮಕ್ಕಳಿಗೆ ನೀಡಿ, ಜೀವಮೌಲ್ಯದ ಬಗ್ಗೆ ಅದರ ರಕ್ಷೆಯ ಬಗ್ಗೆ ಅರಿವಿನ ಜಾಗೃತಿ ಮೂಡಿಸಿದರು.

ಅಪಘಾತ, ಕಟ್ಟಡ ಕುಸಿತದಿಂದ ಮನುಷ್ಯ ಗಾಯಗೊಂಡಾಗ ರಕ್ತಸ್ರಾವ ತಡೆಗಟ್ಟುವ ವಿಧಾನ; ನಿಂತ ಹೃದಯವನ್ನು ತಕ್ಷಣಕ್ಕೆ ಮುಂದಾಗಿ ಯಾವ ರೀತಿ ಸಿ.ಪಿ.ಆರ್. ಅಂದರೆ ಕೃತಕ ಶ್ವಾಸ ಕೊಟ್ಟು ಬಡಿಯುವಂತೆ ಮಾಡಬಹುದು?;ಯಾವುದೇ ವ್ಯಕ್ತಿ ನೀರಿನಲ್ಲಿ ಮುಳುಗಿದಾಗ ಹೇಗೆ ರಕ್ಷಣೆ ಮಾಡಬಹುದು?; ಇಂಪ್ರೂವೇಜ್ ಮೆಥೆಡ್ ನಿಂದ ಹೇಗೆ ವಿಕ್ಟಿಂ ವ್ಯಕ್ತಿಯನ್ನು ಸಾಗಣೆ ಮಾಡಬಹುದು?; ಹೆಡ್ ಇಂಜೂರ್ ಆದಾಗ ಏನು ಮಾಡಬೇಕು!? ಕಟ್ಟಡ ಬೀಳುವಾಗ, ಭೂಕಂಪ ಆದಾಗ, ಸಿಡಿಲು-ಗುಡುಗು ಇದ್ದಾಗ ರಕ್ಷಣೆ ಹೇಗೆ ಮಾಡಿಕೊಳ್ಳಬೇಕು ? ಎಂಬ ಹಲವಾರು ವಿಪತ್ತುಗಳ ಸಂದರ್ಭದಲ್ಲಿ ಆಗುವ ತೊಂದರೆಗಳಿಂದ ಜೀವರಕ್ಷೆ ಹೇಗೆ ಎಂಬುದರ ಬಗ್ಗೆ ಪ್ರಾತ್ಯಕ್ಷಿಕವಾಗಿ ಪ್ರದರ್ಶಿಸಿ ಎನ್ ಡಿ ಆರ್ ಎಫ್ ಯೋಧರು ಮಕ್ಕಳಿಗೆ ತಿಳಿವು ಮೂಡಿಸಿದರು.

ಅಷ್ಟೇ ಅಲ್ಲದೆ, ರಾಷ್ಟ್ರೀಯ ವಿಪತ್ತು ಪಡೆಯು ೨೦೦೫ ರಲ್ಲಿ ಬೆದರಿಸುವ ವಿಪತ್ತು ಪರಿಸ್ಥಿತಿ ಅಥವಾ ದುರಂತಕ್ಕೆ ವಿಶೇಷ ಪ್ರತಿಕ್ರಿಯೆಯ ಉದ್ದೇಶಕ್ಕಾಗಿ ರಚಿಸಲಾದ ಭಾರತೀಯ ವಿಶೇಷ ಪಡೆ. ಇದು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಡಿಯಲ್ಲಿ ಇದೆ. NDRFಈ ನ ಮುಖ್ಯಸ್ಥರನ್ನು ಡೈರೆಕ್ಟರ್ ಜನರಲ್ ಎಂದು ಕರೆಯಲಾಗುತ್ತದೆ. ಎನ್ ಡಿ ಆರ್ ಎಫ್ ನ ಡೈರೆಕ್ಟರ್ ಜನರಲ್ ಗಳು ಭಾರತೀಯ ಪೊಲೀಸ್ ಸಂಸ್ಥೆಗಳಿಂದ ಡೆಪ್ಯೂಟೇಶನ್ ನಲ್ಲಿರುವ ಐಪಿಎಸ್ ಅಧಿಕಾರಿಗಳು.

ಈ ಪಡೆಯಲ್ಲಿ ೧೬ ಬೆಟಾಲಿಯನ್ ಗಳಿವೆ. ಪ್ರತಿ ಬೆಟಾಲಿಯನ್ ನಲ್ಲಿ ೧೧೪೯ ಯೋಧರಿದ್ದಾರೆ.ಪ್ರತಿ ಬೆಟಾಲಿಯನ್ ಪರಿಣಿತ ಶೋಧ ಮತ್ತು ರಕ್ಷಣಾ ತಂಡಗಳನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿದೆ. ಇದರಲ್ಲಿ ಇಂಜಿನಿಯರ್ಸ್, ತಂತ್ರಜ್ಞರು,ಎಲೆಕ್ಟ್ರಿಷಿಯನ್,ಶ್ವಾನದಳಗಳು ಮತ್ತು ವೈದ್ಯಕೀಯ ಸಿಬ್ಬಂದಿ ಸೇರಿ ವಿಶೇಷ ಶೋಧನಾ ಪರಿಣಿತರು ಇರುತ್ತಾರೆ.

ಎನ್.ಡಿ.ಆರ್.ಎಫ್ ನ ೧೬ ಬೆಟಾಲಿಯನ್ ಗಳು , ಭಾರತ ದೇಶದ ರಾಜ್ಯಗಳು - ಅಸ್ಸಾಂ ನ ಗುವಾಹಟಿ ,ಪಶ್ಚಿಮ ಬಂಗಾಳದ ನಾಡಿಯಾ, ಒಡಿಶಾದ ಕಟಕ್, ತಮಿಳುನಾಡಿನ ವೆಲ್ಲೂರು, ಮಹಾರಾಷ್ಟ್ರದ ಪುಣೆ, ಗುಜರಾತ್ ನ ವಡೋದರಾ, ಪಂಜಾಬ್ ನ ಭಟಿಂಡಾ, ಉತ್ತರ ಪ್ರದೇಶದ ಘಾಜಿಯಾಬಾದ್, ಬಿಹಾರದ ಪಾಟ್ನಾ, ಆಂಧ್ರಪ್ರದೇಶದ ವಿಜಯವಾಡ, ಉತ್ತರ ಪ್ರದೇಶದ ವಾರಣಾಸಿ, ಅರುಣಾಚಲ ಪ್ರದೇಶದ ಇಟಾನಗರ, ಜಮ್ಮು ಮತ್ತು ಕಾಶ್ಮೀರದ ಸಂಭಾ , ಹಿಮಾಚಲ ಪ್ರದೇಶದ ಮಂಡಿ, ಉತ್ತರಖಂಡದ ಹಲ್ದ್ವಾನಿ, ನವದೆಹಲಿಯ ನಜಾಫ್ ಗಡ್ ನಲ್ಲಿ ಇವೆ. ಇವುಗಳ ಗುರಿ " ಆಪದಾ ಸೇವಾ ಸದಾ" ಆಗಿದ್ದು, ಈ ವರ್ಷ ೧೮ ಬಿಲಿಯನ್ ನಷ್ಟು ಬಜೆಟ್ ನಲ್ಲಿ ಇದಕ್ಕಾಗಿ ಭಾರತ ಸರ್ಕಾರ ಮೀಸಲಿರಿಸಿದೆ. ಭಾರತದ ಗೃಹಸಚಿವರು ಈ ಪಡೆಯ ಜವಾಬ್ದಾರಿ ಹೊಂದಿರುತ್ತಾರೆ. ವಿಪತ್ತು ಮತ್ತು ತಂತ್ರಜ್ಞಾನ ಚಾಲಿತ ತಂತ್ರವನ್ನು ಅಭಿವೃದ್ಧಿಪಡಿಸುವ ಮೂಲಕ ಸುರಕ್ಷಿತ ಮತ್ತು ವಿಪತ್ತು ನಿರೋಧಕ ಭಾರತವನ್ನು ನಿರ್ಮಿಸುವುದು ಈ ಪಡೆಯ ಗುರಿಯಾಗಿದೆ.

ಭಾರತದ ಎನ್ ಡಿ ಆರ್ ಎಫ್ ತನ್ನ ತ್ವರಿತ ಮತ್ತು ಹೆಚ್ಚು ನುರಿತ ರಕ್ಷಣಾ ಕಾರ್ಯಾಚರಣೆಗಳೊಂದಿಗೆ ಓಆಒಂ ಯ ಅತ್ಯಂತ ಗೋಚರ ಮತ್ತು ರೋಮಾಂಚಕ ಶಕ್ತಿಯಾಗಿ ಹೊರಹೊಮ್ಮಿದೆ. ಎನ್ ಡಿ ಆರ್ ಎಫ್ ಸಿಬ್ಬಂದಿಗಳು ಪ್ರವಾಹ ರಕ್ಷಣೆ, ಕುಸಿದ ರಚನೆಯ ಹುಡುಕಾಟ ಮತ್ತು ಪಾರುಗಾಣಿಕಾ, ವೈದ್ಯಕೀಯ ಮೊದಲ ಪ್ರತಿಸ್ಪಂದಕರು, ಹಗ್ಗ ರಕ್ಷಣೆ, ಮೃತ ದೇಹಗಳ ಗೌರವಾನ್ವಿತ ವಿಲೇವಾರಿ, ಪರಮಾಣು,ಜೈವಿಕ ಮತ್ತು ರಾಸಾಯನಿಕ ತುರ್ತು ಸ್ಥಿತಿಗಳಂತಹ ಕೋರ್ಸ್ ಗಳಲ್ಲಿ ಏಕರೂಪವಾಗಿ ತರಬೇತಿ ಪಡೆಯುತ್ತಾರೆ. ಎನ್ ಡಿ ಆರ್ ಎಫ್ ಸಿಬ್ಬಂದಿಗಳು- NISA, DRDO, BARC,CME, ಸೇನೆ,ನೌಕಾಪಡೆ ಮತ್ತು ವಾಯುಪಡೆಯಂತಹ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಹಾಗೂ US, ಸಿಂಗಾಪುರ್, ಚೀನಾ, ಫಿನ್ಲ್ಯಾಂಡ್ ,ಕೊರಿಯಾ, ಸ್ವಿಟ್ಜರ್ಲೆಂಡ್ ಮುಂತಾದ ವಿದೇಶಗಳಲ್ಲಿ ತರಬೇತಿ ಪಡೆದಿದ್ದಾರೆ.

ಭವಿಷ್ಯದಲ್ಲಿ ದಕ್ಷ ವಿಪತ್ತು ಪ್ರತಿಕ್ರಿಯೆಯ ಕೀಲಿ ಕೈ ಪ್ರಾಥಮಿಕವಾಗಿ ವಿಶೇಷ ವಿಪತ್ತು ಪ್ರತಿಕ್ರಿಯೆ ಪಡೆಗಳ ತರಬೇತಿ ಮತ್ತು ಮರು ತರಬೇತಿಯ ಪರಿಣಾಮಕಾರಿತ್ವವನ್ನು ಅವಲಂಬಿಸಿರುತ್ತದೆ.ಈ ದೃಷ್ಟಿಯಿಂದ ಎನ್ ಡಿ ಎಂ ಎ/ಎನ್ ಡಿ ಆರ್ ಎಫ್ ನಿರ್ದಿಷ್ಟ ವಿಪತ್ತು ಪ್ರತಿಕ್ರಿಯೆ ತರಬೇತಿ ಕೋರ್ಸ್ ಗಳನ್ನು ಗುರುತಿಸಿ ಮತ್ತು ಈ ತರಬೇತಿ ಕೋರ್ಸ್ ಗಳಿಗೆ ಏಕೀಕೃತ ರಚನಾತ್ಮಕ ಮತ್ತು ಏಕರೂಪದ ಕೋರ್ಸ್ ಮಾಡ್ಯೂಲ್ ಮತ್ತು ಪಠ್ಯಕ್ರಮವನ್ನು ರೂಪಿಸುವ ವಿವರವಾದ. ವಿಪತ್ತು ಪ್ರತಿಕ್ರಿಯೆಗಾಗಿ ತರಬೇತಿ ನಿಯಮವನ್ನು ಸಿದ್ಧಪಡಿಸಿದೆ.

NDRF ಗೆ ಸೇರಲು ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ವಿಭಾಗದಲ್ಲಿ ಕನಿಷ್ಠ ಡಿಪ್ಲೋಮಾ / ಪದವಿ/ ಸ್ನಾತಕೋತ್ತರ ಪದವಿ ಹೊಂದಿರಬೇಕು.ಕನಿಷ್ಟ ವಯೋಮಿತಿ ೧೮ ಹಾಗೂ ಗರಿಷ್ಠ ವಯೋಮಿತಿ ೨೫ ವರ್ಷಗಳಾಗಿರಬೇಕು. ಭಾರತೀಯ ನಾಗರಿಕರು ಮಾತ್ರ ಇದಕ್ಕೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಇದರ ನೇಮಕಾತಿಯು ಭಾರತದ ಭದ್ರತೆ ಮತ್ತು ಮೀಸಲು ಪಡೆಗಳಾದ ಸೆಂಟ್ರಲ್ ರಿಸರ್ವ್ ಪೋಲೀಸ್ ಫೋರ್ಸ್ ( ಸಿಆರ್ ಪಿ ಎಫ್) , ಸಶಸ್ತ್ರ ಸೀಮಾ ಬಾಲ್ ( ಎಸ್ ಎಸ್ ಎಸ್ ಬಿ ), ಇಂಡೋ - ಟಿಬೆಟಿಯನ್ ಬಾರ್ಡರ್ ಪೋಲೀಸ್ (ಐಟಿಬಿಪಿ) , ಬಾರ್ಡರ್ ಸೆಕ್ಯುರಿಟಿ ಫೋರ್ಸ್ ( ಬಿಎಸ್ಎಸ್ ಎಫ್) ಮತ್ತು ಸೆಂಟ್ರಲ್ ಸೆಕ್ಯುರಿಟಿ ಫೋರ್ಸ್ ಗಳನ್ನು ಒಳಗೊಂಡಿರುತ್ತದೆ. ಮಹಾನಿರ್ದೇಶಕರು, ಹೆಚ್ಚುವರಿ ನಿರ್ದೇಶಕರು, ಇನ್ಸ್ಪೆಕ್ಟರ್ ಜನರಲ್, ಡೆಪ್ಯುಟಿ ಇನ್ಸ್ಪೆಕ್ಟರ್ ಜನರಲ್ , ಕಮಾಂಡೆಂಟ್ , ಸೆಕೆಂಡ್ ಇನ್ ಕಮಾಂಡೆಂಟ್, ಉಪ ಕಮಾಂಡೆಂಟ್, ಸಹಾಯಕ ಕಮಾಂಡೆಂಟ್, ಸುಬೇದಾರ್ ಮೇಜರ್, ಇನ್ಸ್ಪೆಕ್ಟರ್ , ಸಬ್ ಇನ್ಸ್ಪೆಕ್ಟರ್, ಸಹಾಯಕ ಇನ್ಸ್ಪೆಕ್ಟರ್, ಹೆಡ್ ಕಾನ್ಸ್ಟೆಬಲ್, ಕಾನ್ಸ್ಟೆಬಲ್ ಹುದ್ದೆಗಳ ಶ್ರೇಣಿಗಳು ಸೇವಾ ಸಾಧನೆ ಸಾಮರ್ಥ್ಯ ಆಧರಿಸಿ ಇರುತ್ತವೆ. ದೇಶಾಭಿಮಾನದ ಸೇವೆ ಮಾಡಲು ಈ ಹುದ್ದೆಗಳು ಸಹಕಾರಿಯಾಗಿವೆ ಎಂಬ ಸೇವಾ ಮಾಹಿತಿಯನ್ನು ಮಕ್ಕಳಿಗೆ ಪ್ರೇರಣಾತ್ಮಕವಾಗಿ ಈ ಸಂದರ್ಭದಲ್ಲಿ ನೀಡಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಶಾಲೆಯತನಕ ಬಂದು ಮುಂಬೆಳಕುಗಳಿಗೆ ದೇಶ ಸೇವೆಯ ಅರಿವನ್ನು ಮೂಡಿಸಿದ ಎನ್ ಡಿ ಆರ್ ಎಫ್ ವಿಜಯವಾಡ ಬೆಟಾಲಿಯನ್ ನ ಭಾಗವಾದ ಯಲಹಂಕದ ಸಿಬ್ಬಂದಿಗಳಿಗೆ ಕೃತಜ್ಞತೆಗಳೊಂದಿಗೆ ವಂದನೆಯನ್ನು ಸಲ್ಲಿಸುತ್ತಾ ಶಾಲೆಯ ಉಪಪ್ರಾಂಶುಪಾಲರಾದ ಗೋಪಾಲಕೃಷ್ಣರವರು , ಮಕ್ಕಳನ್ನು ಉದ್ದೇಶಿಸಿ, ಸಮಾಜದಲ್ಲಿ ಹಲವಾರು ಉತ್ಸವ ಕಾರ್ಯಕ್ರಮಗಳನ್ನು ಮಾಡುತ್ತೇವೆ ಮಕ್ಕಳೇ, ಹೀಗೆ ಒಮ್ಮೆ ಗಣೇಶ ಉತ್ಸವ ಸಂದರ್ಭ. ಗಣೇಶ ವಿಸರ್ಜನೆಯನ್ನು ಮಾಡಲು ಕೃಷಿ ಹೊಂಡದ ಬಳಿ ಹೋದಾಗ ಒಬ್ಬ ನಿಮ್ಮಂತಹ ಹುಡುಗ ಉತ್ಸಾಹದ ಸಂಭ್ರಮದಲ್ಲಿ ಮುಂದಾಗಿ ಕಾಲು ಜಾರಿ ಹೊಂಡಕ್ಕೆ ಬಿದ್ದ! ಆಗ ಜೊತೆಯಿದ್ದ ಆ ಹುಡುಗನ ತಾಯಿ ತಾನು ಉಟ್ಟ ಸೀರೆಯನ್ನೇ ಬಿಚ್ಚಿ ಮಗನಿಗೆ ಗಟ್ಟಿಯಾಗಿ ಸೀರೆಯನ್ನು ಹಿಡಿದುಕೊಳ್ಳಲು ಹೇಳಿ ಎಸೆದು ಇನ್ನೊಂದು ಸೀರೆಯ ತುದಿಯನ್ನು ತಾನು ಹಿಡಿದು ಎಳೆದು ಮಗನನ್ನು ದಡಕ್ಕೆ ತಂದು ಉಳಿಸುತ್ತಾಳೆ! ಇವೆಲ್ಲ ತಕ್ಷಣದ ವಿವೇಕ ವಿವೇಚನೆ ಧೈರ್ಯದಿಂದ ಮಾತ್ರ ಸಾಧ್ಯ ಆಗುತ್ತದೆ. ಅವಘಡ ಸಂಭವಿಸಿದಾಗ ಹೆದರಬಾರದು ಎಂದು,,,, ಬರೀ ತರಗತಿಯೊಳಗೆ ಪುಸ್ತಕದ ಪಾಠ ತಿಳಿದರೆ ಸಾಲದು ಜೀವ ಜೀವನ ರಕ್ಷೆಯ ಕೌಶಲ್ಯ ತರಬೇತಿಗಳನ್ನು ಪಡೆದು ಕಲಿತಿರಬೇಕು. ವಿಪತ್ತು ಸನ್ನವೇಶಗಳಲ್ಲಿ ಆ ಜ್ಞಾನ ಕೌಶಲ್ಯಗಳನ್ನು ವಿವೇಚನೆಯಿಂದ ಬಳಸಿಕೊಳ್ಳಬೇಕು. ನಾಕು ದಿನದ ಜೀವನವನ್ನು ಮನುಷ್ಯತ್ವದಿಂದ ಜೀವಿಸಬೇಕು. ಇಂತಹ ಮಾನವೀಯ ಕಳಕಳಿಯ ಜೀವಂತಿಕೆ ಪಾಠ ಇಂದು, NDRF ಯೋಧರಿಂದಲೇ ನಮ್ಮ ಶಾಲೆಯ ಆವರಣದಲ್ಲಿ ನಮಗೆ ಸಿಕ್ಕಿರುವುದು ನಮಗೆ ಸಂತೋಷ ಹೆಮ್ಮೆ ತಂದಿದೆ.ಎಂದು NDRF ಗೆ ವಂದನಾರ್ಪಣಾ ಗೌರವ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಶಾಲಾ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳು, ಉಪನ್ಯಾಸಕರು,ಶಿಕ್ಷಕರು,ಎಸ್ ಡಿಎಂ ಸಿ ಹಾಗೂ ಇತರೆ ಸಿಬ್ಬಂದಿಗಳು ಉಪಸ್ಥಿತರಿದ್ದು, ಮಾನವತೆಯ ಕಾರುಣ್ಯ ಕಾಯಕದ ಪ್ರದರ್ಶನ ತರಬೇತಿಯಲ್ಲಿ ಮಿಂದು ಧನ್ಯತೆಯ ಅನುಭಾವ ಪಡೆದರು.;

## ಶಿಕ್ಷಕರಾಗುವ ವಿದ್ಯಾರ್ಥಿಗಳು ಒಳ್ಳೆಯ ಚಾರಿತ್ರೆಯನ್ನು ಹೊಂದಬೇಕು ಪ್ರೊ, ಸಾತಿಹಾಳ..



ವಿಜಯಪುರ ಜಿಲ್ಲೆಯ ತಾಳಿಕೋಟಿ ನಗರದ ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ೨೦೨೩-೨೪ ಸಾಲಿನ ಪ್ರಶಿಕ್ಷಣಾರ್ಥಿಗಳಿಗೆ ಸ್ವಾಗತ ಹಾಗೂ ಸರಸ್ವತಿ ಪೂಜಾ ಕಾರ್ಯಕ್ರಮ ಹಾಗೂ ಪಾಲಕರ ಸಭೆಯನ್ನು ದಿನಾಂಕ ೧೨.೨.೨೦೨೪ರ ಸೋಮವಾರದಂದು ನಗರದ ವಿರಕ್ತ ಶ್ರೀ ಸಭಾಭವನದಲ್ಲಿ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ವಿಜಯಪುರ ನಗರದ ದರಬಾರ ಪದವಿ ಮಹಾವಿದ್ಯಾಲಯದ ಸಮಾಜಶಾಸ್ತ್ರ ಉಪನ್ಯಾಸಕರಾದ ಶ್ರೀ ಜಗದೀಶ ಸಾತಿಹಾಳ ಅವರು ವಹಿಸಿಕೊಂಡು ಸರಸ್ವತಿಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಉದ್ಘಾಟನೆ ಮಾಡಿ ಮಾತನಾಡಿದರು.

ಪ್ರಶಿಕ್ಷಣಾರ್ಥಿಗಳನ್ನು ಮತ್ತು ಪಾಲಕರನ್ನು ಉದ್ದೇಶಿಸಿ ಸಂಸ್ಕಾರ, ಸಂಸ್ಕೃತಿ ಇಲ್ಲದ ಶಿಕ್ಷಣ ವ್ಯರ್ಥ. ನಾಳೆ ಶಿಕ್ಷಕರರಾಗುವ ನೀವು ಒಳ್ಳೆಯ ಚಾರಿತ್ರೆಯನ್ನು ಹೊಂದಬೇಕು. ಮಕ್ಕಳ ಮಟ್ಟಕೀಳುದು ಪಾಠ ಮಾಡಬೇಕು ನಮಗೆ ಎಷ್ಟೋ ಶಿಕ್ಷಕರೂ ಪಾಠ ಮಾಡಿದರೂ ಅವರೆಲ್ಲ ನೆನೆಪಲ್ಲೇ ಮಾತ್ರ ಇರುತ್ತಾರೆ. ಆದರೆ ಹೃದಯದಲ್ಲಿ ಇರುವರ ಶಿಕ್ಷಕರು ಕೆಲವರೂ ಮಾತ್ರ ಕಾರಣ ಅವರ ಭೋದನಾ ಶೈಲಿ ಮತ್ತು ಮಕ್ಕಳೊಂದಿಗೆ ಪರಸ್ಪರ ಒಡನಾಟದಿಂದಿರುವುದು, ಅವರು ವಿದ್ಯಾರ್ಥಿಗಳೊಂದಿಗೆ ಪರಸ್ಪರ ಸಹೋದರತ್ವದಿಂದ ವರ್ತಿಸಿ ಹೊಂದಿಕೊಂಡು ಹೊರಟಾಗ ಮಾತ್ರ ಉತ್ತಮ ಶಿಕ್ಷಕರು ಎನಿಸಿಕೊಳ್ಳಬಹುದು. ಶಿಕ್ಷಕರಾಗಲು ದೊಡ್ಡ ತಪಸ್ಸು ಮಾಡಬೇಕೆಂದು ನನಗೆ ಕಲಿಸಿದ ಶಿಕ್ಷಕರು ಹೇಳುತ್ತಿದ್ದರು ಅದು ನನ್ನ ಜೀವನದಲ್ಲಿ ಸತ್ಯವಾಗಿದೆ. ದೇಶದ ಭವಿಷ್ಯ ಶಿಕ್ಷಕರ ಕೈಯಲ್ಲಿದೆ ಇರುದರಿಂದ ಚಾರಿತ್ರೆ ಯುಳ್ಳ ಶಿಕ್ಷಕರಿಂದ ಮಾತ್ರ ಉತ್ತಮ ವಿದ್ಯಾರ್ಥಿಗಳು ಬರಲು ಸಾಧ್ಯ ಈ ನಟ್ಟಿನಲ್ಲಿ ಈ ಭಾಗದ ಶಿಕ್ಷಣ ಸಂಸ್ಥೆಯಲ್ಲಿ ಉತ್ತಮ ಶಿಕ್ಷಕರ ತರಬೇತಿ ಕೊಡುವ ಶಿಕ್ಷಣ ಸಂಸ್ಥೆ ಇದಾಗಿದೆ. ಕಾರಣ ಪರಮ ಪೂಜ್ಯ ಖಾಸ್ಗತೇಶ್ವರ ಅಜ್ಜರ ಹೆಸರಿನೊಂದಿಗೆ ಈ ಸಂಸ್ಥೆ ಹುಟ್ಟಿಕೊಂಡಿದೆ. ಕೋವಿಡ್ ಸಂದರ್ಭದಲ್ಲಿ ಎಲ್ಲಾ ಸ್ವಾಮೀಜಿ ಅವರ ತಮ್ಮ ತಮ್ಮ ಮಠ ಬಿಟ್ಟು ಹೊರಗೆ ಬರಲಿಲ್ಲ ಆದರೆ ಈ ಮಠ ಮರಿ ಸಿದ್ದಲಿಂಗ ದೇವರು ಪ್ರತಿ ಹಳ್ಳಿ ಹಳ್ಳಿಗೆ ಹೋಗಿ ಬಡವರಿಗೆ ಆಹಾರದ ಕಿಟ್ಟುಗಳನ್ನು ಮನೆ ಮನೆಗೆ ತೆರಳಿ ಹಂಚಿದ ದೇವರು ಇವರಾಗಿದ್ದಾರೆ .ಅವರ ಆಶೀರ್ವಾದಿಂದ ಸ್ಥಾಪನೆಯಾದ ಈ ಸಂಸ್ಥೆ ವಿಶೇಷವಾದ ಕಾರ್ಯಕ್ರಮ ಸಂತಸದ ವಿಷಯ. ನಾವು ನಮ್ಮ ಜೀವಿತ ಈ ಅವಧಿಯಲ್ಲಿ ದೇಶಕ್ಕಾಕಿ ಏನಾದ್ರು ಕೊಡುಗೆ ಕೊಟ್ಟು ಹೋಗದ ಜೀವ & ಜೀವನ ವ್ಯರ್ಥ. ಎಂದು ಮಾರ್ಮಿಕವಾಗಿ ಮಾತನಾಡಿದ್ದರು.

ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಶ್ರೀ ಬಿ ಎಂ ಹಿಪ್ಪರಗಿ, ಕೆ ಎಸ್ ಮುರಾಳ, ಆರ್ ಸಿ ಪಾಟೀಲ್, IQSC ಘಟಕದ ಮುಖ್ಯಸ್ಥರೂ ಶ್ರೀ ಉಮೇಶ ಮನಗೊಂಡು,ಅವರು ಉಪಸ್ಥಿತರಿದ್ದರು..

ಇದೇ ಸಂದರ್ಭದಲ್ಲಿ ಟಿಇಟಿ ಪರೀಕ್ಷೆಯಲ್ಲಿ ಪಾಸಾದ ಪ್ರತಿಕ್ಷಣಾರ್ಥಿಗಳಿಗೆ ಸನ್ಮಾನವನ್ನು ಮಾಡಲಾಯಿತು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೇ ವಹಿಸಿಕೊಂಡ ಡಾ ಆರ್ ಎಮ್ ಬಂಟನೂರ ಅವರು ಮಾತನಾಡಿ ಪಾಲಕರ ಸಹಕಾರ ಇದ್ದಾರೆ ಮಾತ್ರ ನಮಗೆ ನಮ್ಮ ಮಕ್ಕಳನ್ನು ಉತ್ತಮ ಶಿಕ್ಷಕರನಾಗಿ ಮಾಡಲು ಸಹಾಯವಾಗುತ್ತೆ ಎಂದು ಹೇಳಿದರು.

ಕಾರ್ಯಕ್ರಮದ ನಿರೂಪಣೆ ಅಮ್ಮಿರಾಬಾಯಿ ಪ್ರತಿಕ್ಷಣಾರ್ಥಿಗಳು ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯ ತಾಳಿಕೋಟಿ. ಅವರು ನಡಿಸಿಕೊಟ್ಟರು.

## ಪಾಲಿಕೆಯ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯವನ್ನು ನಿರ್ವಹಿಸುತ್ತಿರುವ ಪೌರ ಚಾಲಕರು, ನೀರು ಗಂಟಿಗಳು, ಲೋಡರ್ಸ್, ಕ್ಲೀನರ್ಸ್, ಯು.ಜಿ.ಡಿ ಕಾರ್ಮಿಕರು ಸೇರಿದಂತೆ ಎಲ್ಲಾ ಬಗೆಯ ಹೊರಗುತ್ತಿಗೆ ನೌಕರರು ನಡೆಸುತ್ತಿದ್ದ ಪ್ರತಿಭಟನೆಯಲ್ಲಿ ಪಾಲಿಕೆ ವಿರೋಧ ಪಕ್ಷದ ನಾಯಕರಾದ ಪ್ರಸನ್ನ ಕುಮಾರ್ ಭೇಟಿ ಮನವಿಸ್ವೀಕಾರ.




ದಾವಣಗೆರೆ;ಮಹಾನಗರ ಪಾಲಿಕೆ ಆವರಣದಲ್ಲಿ, ಪಾಲಿಕೆಯ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯವನ್ನು ನಿರ್ವಹಿಸುತ್ತಿರುವ ಪೌರ ಚಾಲಕರು, ನೀರು ಗಂಟಿಗಳು, ಲೋಡರ್ಸ್, ಕ್ಲೀನರ್ಸ್, ಯು.ಜಿ.ಡಿ ಕಾರ್ಮಿಕರು ಸೇರಿದಂತೆ ಎಲ್ಲಾ ಬಗೆಯ ಹೊರಗುತ್ತಿಗೆ ನೌಕರರು ನಡೆಸುತ್ತಿದ್ದ ಪ್ರತಿಭಟನೆಯಲ್ಲಿ ಪಾಲಿಕೆ ವಿರೋಧ ಪಕ್ಷದ ನಾಯಕರಾದ ಪ್ರಸನ್ನ ಕುಮಾರ್ ಮತ್ತು ಮಾಜಿ ಮೇಯರ್ ಎಸ್ಟಿ.ವೀರೇಶ್, ಪಾಲಿಕೆ ಸದಸ್ಯರಾದ ಆರ್ ಶಿವಾನಂದ್, ಭಾಗವಹಿಸಿ ಮನವಿಯನ್ನು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಸನ್ನ ಕುಮಾರ್, ಈ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಎಲ್ಲಾ ಮಹಾನಗರ ಪಾಲಿಕೆ ನೌಕರರನ್ನ, ನೇರ ಪಾವತಿ ಅಡಿ ತರಲು ಸರ್ಕಾರಕ್ಕೆ ಈ ಕೂಡಲೆ ಇವರ ಬೇಡಿಕೆಯನ್ನು ಆಯುಕ್ತರು ಸರಕಾರಕ್ಕೆ ಕಳುಹಿಸಬೇಕು ,ಈಗಾಗಲೇ ಮುಂದಿನ ಸಾಮಾನ್ಯ ಸಭೆಯಲ್ಲಿ ಹೊರಗುತ್ತಿಗೆ ಯನ್ನು ರದ್ದು ಪಡಿಸಿ, ನೇರ ಪಾವತಿಯಲ್ಲಿ ನೇಮಕಾತಿ ಮಾಡಬೇಕು, ಎಂಬ ವಿಷಯವನ್ನ ತರಲು ಕೋರಿದ್ದೇವೆ ಮತ್ತು ಸಭೆಯಲ್ಲಿ ತೀರ್ಮಾನ ಮಾಡಿ ಅದನ್ನ ಸರ್ಕಾರಕ್ಕೆ ಕಳಿಸಬೇಕು ಎಂಬ ಪತ್ರವನ್ನ ಈಗಾಗಲೆ ಬಿಜೆಪಿ ಎಲ್ಲಾ ಪಲಿಕೆ ಸದಸ್ಯರು ಪರವಾಗಿ ನೀಡಿದ್ದೇವೆ ಹಾಗು ಈ ವಿಷಯವನ್ನು ರಾಜ್ಯ ವಿಧಾನ ಮಂಡಲ ಅಧಿವೇಶನದಲ್ಲಿ ಸರ್ಕಾರಕ್ಕೆ ಒತ್ತಾಯಿಸಲು ಕೋರಿ ಬಿಜೆಪಿ ರಾಜ್ಯ ವಿರೋಧ ಪಕ್ಷದ ನಾಯಕರು ಮತ್ತು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಿಗೆ ಮನವಿಯನ್ನ ಸಲ್ಲಿಸಲಾಗಿದೆ ನಿಮ್ಮ ಬೇಡಿಕೆ ಈಡೇರಿಸಬೇಕು ಎಂಬ ಒತ್ತಡ ಮಾಡ್ತೆವೆ ಎಂಬ ಅಭಯವನ್ನ ನೀಡಿದ್ದೇವೆ. ಮುಂದಿನ ದಿನಗಳಲ್ಲಿ ಹೋರಾಟ ಸಂದರ್ಭದಲ್ಲಿ, ಸಾರ್ವಜನಿರಿಗೆ ತೊಂದರೆ ಆಗದಂತೆ, ಕಾರ್ಮಿಕರು ಕೆಲಸ ನಿರ್ವಹಿಸಬೇಕು, ಎಲ್ಲರೂ ಹೋರಾಟ ಮಾಡಿದರೆ, ಸಾರ್ವಜನಿಕರಿಗೆ ತೊಂದರೆ ಆಗುತ್ತೆ, ಮತ್ತು ತೊಂದರೆ ಆಗದೇ ಇರುವ ರೀತಿ ಹೋರಾಟವನ್ನ ರೂಪಿಸಲಿ ಎಂಬ ಮನವರಿಕೆ ಮಾಡಲಾಯಿತು ಮತ್ತು ಸರ್ಕಾರ ಬೇಗನೇ ಇವರ ಬೇಡಿಕೆ ಈಡೇರಿಸಲಿ ಎಂದು ಆಗ್ರಹಿಸುತ್ತಾ ನಮ್ಮ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ಈಕೂಡಲೆ ಈ ಸಮಸ್ಯೆಯನ್ನ ಸರ್ಕಾರದ ಗಮನಕ್ಕೆ ತಂದು ಪರಿಹರ್ಸಬೇಕು ಎಂಬ ಆಗ್ರಹವನ್ನ ಪಾಲಿಕೆಯ ಎಲ್ಲಾ ಬಿಜೆಪಿ ಸದಸ್ಯರೂ, ಮತ್ತು ವಿರೋಧ ಪಕ್ಷದ ನಾಯಕನಾಗಿ ನಾನು ಮಾಡುತ್ತಿದ್ದೇನೆಂದು ಪ್ರಸನ್ ಕುಮಾರ್ ಹೇಳಿದರು.

## ಅರಣ್ಯ ವೀಕ್ಷಕ ಗ್ರೂಪ್ ಡಿ ಹುದ್ದೆಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ;ಆಕ್ಷೇಪಣೆ ಸಲ್ಲಿಸಲು ಫೆ.೨೦ ಕೊನೆಯ ದಿನ

ಧಾರವಾಡಫೆ.೧೪: ಧಾರವಾಡದ ವ್ಯಾಪ್ತಿಗೆ ಸಂಭಂದಿಸಿದಂತೆ ೭ ಅರಣ್ಯ ವೀಕ್ಷಕ ಹುದ್ದೆಗಳ ನೇಮಕಾತಿಗಾಗಿ ಈಗಾಗಲೇ ಆಲೈನ್ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗಿದೆ.

ಅಭ್ಯರ್ಥಿಗಳ ದೈಹಿಕ ತಾಳ್ವಿಕೆ ಪರೀಕ್ಷೆ, ದೈಹಿಕ ಕಾರ್ಯ ಸಮರ್ಥತೆ ಪರೀಕ್ಷೆ ಹಾಗೂ ದೇಹದಾಢ್ಯ್ರತೆ ಪರೀಕೆಗೆ ಮೆರಿಟ್ ಹಾಗೂ ನೇರ ಮತ್ತು ಸಮತಳ ಬಿಂದುಗಳ ಅನುಸಾರ ಅರ್ಹತೆ ಪಡೆದ ಅಭ್ಯರ್ಥಿಗಳ ೧:೨೦ ರ ಅನುಪಾತದಲ್ಲಿ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಇಲಾಖೆಯ ಅಂತರ್ಜಾಲ https://aranya.gov.in ದಲ್ಲಿ ಪ್ರಕಟಿಸಲಾಗಿದೆ.

ಮತ್ತು ಪ್ರತೀ ಪ್ರವರ್ಗದಲ್ಲಿ ತಾತ್ಕಾಲಿಕವಾಗಿ ಆಯ್ಕೆ ಆಗಿರುವ ಕೊನೆಯ ಅಭ್ಯರ್ಥಿಯು ಗಳಿಸಿರುವ ಅಂಕಗಳ ಶೇಕಡಾವಾರು ಮಾಹಿತಿಯ ವಿವರವನ್ನು ಪ್ರಕಟಿಸಲಾಗಿದೆ.

ಅಭ್ಯರ್ಥಿಗಳಿಗೆ ಆಕ್ಷೇಪಣೆ ಇದ್ದಲ್ಲಿ ಪೂರಕ ದಾಖಲಾತಿಗಳೊಂದಿಗೆ ಸ್ಪಷ್ಟ ರೀತಿಯಲ್ಲಿ ಆಕ್ಷೇಪಣೆಯನ್ನು ವಿವರಿಸಿ ಇ-ಮೇಲ್ cfdcdwd@yahoo.co.in ಅಥವಾ ಸ್ಪೀಡ್ ಪೋಸ್ಟ್ ಅಥವಾ ರಿಜಿಸ್ಟರ್ ಪೋಸ್ಟ್ ಮೂಲಕ ಧಾರವಾಡ ವೃತ್ತ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಗೆ ಫೆಬ್ರವರಿ ೨೦, ೨೦೨೪ರ ಸಂಜೆ ೫:೩೦ ಗಂಟೆಯ ಒಳಗೆ ಸಲ್ಲಿಸಬೇಕು. ಆಕ್ಷೇಪನೆ ಸಲ್ಲಿಸಲು ನಿಗದಿಪಡಿಸಿದ ದಿನಾಂಕದ ನಂತರ ಮತ್ತು ಆಕ್ಷೇಪನೆ ಸಲ್ಲಿಸಲು ತಿಳಿಸಿರುವ ವಿಧಾನ ಹೊರತುಪಡಿಸಿ ಇತರೆ ವಿಧಾನ ಅಥವಾ ಕೋರಿಯರ ಮೂಲಕ ಸ್ವಿಕೃತವಾಗಿವ ಮತ್ತು ಅಸ್ಪಷ್ಟ ಆಕ್ಷೇಪನೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಆಯ್ಕೆ ಪ್ರಾಧಿಕಾರ ಆಗಿರುವ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಾರತದ ಸಂವಿಧಾನ ಕುರಿತು ವಿಶೇಷ ಲೇಖನಗಳು









## ಶರಣ ಪರಂಪರೆಯ ಆಶಯಗಳ ಬಿಂಬಕ ಸಂವಿಧಾನ ಮತ್ತು ಸರ್ಕಾರದ ಸಂವಿಧಾನ ಜಾಥಾ; ಡಾ. ಆರ್ ನಾಗರಾಜು

ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ಪ್ರಜೆಗಳೇ ಆಳುವ ಸರಕಾರವು ಪ್ರಜಾಪ್ರಭುತ್ವವಾಗಿರುತ್ತದೆ. ಈ ಪ್ರಜಾಪ್ರಭುತ್ವದ ಆಶಯಗಳು ಸಂವಿಧಾನದಲ್ಲಿ ಅಡಗಿರುತ್ತವೆ ಇಂತಹ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಪರಿಕಲ್ಪನೆಗಳನ್ನು ನಾವು ೧೨ ಶತಮಾನದಲ್ಲಿ ಕ್ರಾಂತಿ ಉಂಟು ಮಾಡಿದ ವಚನ ಚಳವಳಿಯಲ್ಲಿ ಹಾಗೂ ವಚನ ಸಾಹಿತ್ಯದಲ್ಲಿ ಕಾಣಬಹುದು. ವಚನ ಚಳವಳಿ ವಿಶ್ವದ ಶ್ರೇಷ್ಠ ಪ್ರಜಾಪ್ರಭುತ್ವವಾಗಿದೆ. ವಚನ ಸಾಹಿತ್ಯ ಶ್ರೇಷ್ಠ ಸಂವಿಧಾನವಾಗಿದೆ.

ವಚನ ಮತ್ತು ಸಂವಿಧಾನ ಒಂದೇ ಅವು ಬೇರೆ ಬೇರೆ ಅಲ್ಲ. ವಚನಗಳಲ್ಲಿರುವ ಅಂಶಗಳು ಸಂವಿಧಾನದಲ್ಲಿವೆ. ದೇಶದ ಪ್ರಗತಿಯಲ್ಲಿ ವಚನ ಸಾಹಿತ್ಯ ಮತ್ತು ಸಂವಿಧಾನದ ತತ್ವಗಳು ಪ್ರಮುಖ ಪಾತ್ರ ವಹಿಸುತ್ತವೆ. ದೇಶದ ಸಂವಿಧಾನವು ಪ್ರತಿಯೊಬ್ಬ ವ್ಯಕ್ತಿಗೂ ಸಮಾನತೆಯ ಸ್ವಾತಂತ್ರ್ಯ ನೀಡಿದೆ. ವಚನಗಳು ಬದುಕಿನ ಸಾರ್ಥಕತೆಯ ದಾರಿದೀಪಗಳಾಗಿವೆ. ವಚನ ಚಳುವಳಿಯ ಮುಂಚೂಣಿಯಲ್ಲಿದ್ದ ಬಸವಣ್ಣ ಒಳ್ಳೆಯ ಅರ್ಥಶಾಸ್ತ್ರಜ್ಞನಾಗಿದ್ದನು. ಸಾಮಾಜಿಕ ನ್ಯಾಯ ಮತ್ತು ಮಾನವ ಹಕ್ಕುಗಳ ಪ್ರತಿಪಾದಕ ನಾಗಿದ್ದನು.ಇವನನ್ನು ಪ್ರಜಾಪ್ರಭುತ್ವದ ಪಿತಾಮಹ ಎಂದು ಸಹ ಕರೆಯಬಹುದು ಸಂವಿಧಾನ ನಮ್ಮ ದೇಶದ ಗ್ರಂಥ. "ಭಾರತವೇ ಧರ್ಮ.ಸಂವಿಧಾನವೇ ಧರ್ಮಗ್ರಂಥ" ಎಂದು ನಾವು ಒಪ್ಪಿಕೊಂಡು ನಡೆಯುತ್ತಿದ್ದೇವೆ.

ವಚನ ಸಾಹಿತ್ಯವು ಸಂವಿಧಾನದಂತೆ ಸರ್ವರಿಗೂ ಸಮಬಾಳು ಸಮಪಾಲು ಎಂಬ ತತ್ತ್ವವನ್ನು ನೀಡುತ್ತದೆ. ಸರ್ವಸಮಾನತೆಯ ಸಮಾಜ ನಿರ್ಮಾಣವೇ ವಚನ ಸಾಹಿತ್ಯದ ಪ್ರಮುಖ ತತ್ವವಾಗಿದೆ. ಇದರಿಂದಾಗಿಯೇ ೨೦೦ ವರ್ಷಗಳು ಕಳೆದರೂ ವಚನ ಸಾಹಿತ್ಯ ಜೀವಂತವಾಗಿದೆ.

ಹಾಗಾಗಿ ಬಸವಣ್ಣನವರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವ ಅಂದರೆ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಜನಸಾಮಾನ್ಯರಿಗೆ ಮುಕ್ತವಾಗಿ ಸಿಗಬೇಕು ಎಂಬ ನಿಲುವು ಅವರದಾಗಿತ್ತು. ಬಸವಣ್ಣನವರು ಕಾಯಕ ನಿಷ್ಠೆಗೆ ಮಾನವೀಯತೆಗೆ ಭದ್ರ ಬುನಾದಿ ಹಾಕಬೇಕೆಂದು ನಂಬಿ ಅದರಂತೆ ನಡೆದವರು ಹಾಗೆ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳ ಸೇವೆಗಳು ಅನುಭವ ಮಂಟಪದ ಅಡಿಯಲ್ಲಿ ಸಾಗಿದವು.

ಶರಣರೆಲ್ಲರೂ ಸೇರಿ ಆದರ್ಶ ಸಮಾನತೆಯ ಸಮಾಜವನ್ನು ಕಟ್ಟಿದರು. ವಚನ ಸಾಹಿತ್ಯವನ್ನು ರಚಿಸಿದರು ಹಾಗೂ ಬಸವಣ್ಣನವರು, ಅವರ ಆತ್ಮ ಬಂಧ ಅನುಭವದ ವೈಜ್ಞಾನಿಕ ಮನೋ ಧರ್ಮದ ದೃಷ್ಟಿಯಿಂದ ಲಿಂಗಾಯತ ಧರ್ಮವನ್ನು ಸ್ಥಾಪಿಸಿ ಬೆಳೆಸಿ ವಚನಗಳನ್ನು ರಚಿಸಿ ವಚನ ಚಳವಳಿಯನ್ನು ರೂಪಿಸಿ ಇಂದಿನ ಪೀಳಿಗೆಗೆ ಬಿಟ್ಟು ಹೋಗಿದ್ದಾರೆ.

೧೨ ಶತಮಾನದ ಬಸವಾದಿಶರಣರು ರಚಿಸಿದ ವಚನಗಳಲ್ಲಿ ಇಂದಿನ ೨೧ ಶತಮಾನದ ವಿಶ್ವಸಂಸ್ಥೆ ಘೋಷಿಸಿದ ಎಲ್ಲಾ ಮಾನವ ಹಕ್ಕುಗಳು ಎಲ್ಲಾ ವಿಚಾರಗಳು ಸೇರಿವೆ ಸ್ಥಾವರಲಿಂಗಕ್ಕೆ ಪರ್ಯಾಯವಾಗಿ ಇಷ್ಟಲಿಂಗ. ಶಿವಾಲಯಕ್ಕೆ ಪರ್ಯಾಯವಾಗಿ ಅನುಭವ ಮಂಟಪ. ದಾನಕ್ಕೆ ಪರ್ಯಾಯವಾಗಿ ದಾಸೋಹ. ಕರ್ಮ ಸಿದ್ಧಾಂತ ಕ್ಕೆ ಪರ್ಯಾಯವಾಗಿ ಕಾಯಕ ಸಿದ್ಧಾಂತ.

ಹೀಗೆ ಎಲ್ಲಾ ರೀತಿಯಿಂದಲೂ ಬಸವಣ್ಣನವರು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿದು ಕೊಳ್ಳುವುದರ ಮೂಲಕ ಬದುಕಿನುದ್ದಕ್ಕೂ ಚ್ಯುತಿ ಬರದಂತೆ ಕಾಪಾಡಿಕೊಂಡು ಬಂದಿದ್ದರು. ಇದನ್ನು ನಾವೆಲ್ಲರೂ ಉಳಿಸಿಕೊಂಡು ಬೆಳೆಸಿಕೊಂಡು ಹೋಗುವ ಹೊಣೆಗಾರಿಕೆ ಪ್ರತಿಯೊಬ್ಬ ದೇಶವಾಸಿಗಳ ಮೇಲಿದೆ ಎಂದರೆ ತಪ್ಪಾಗಲಾರದು. ಇಂತಹ ಪ್ರಜಾಪ್ರಭುತ್ವದ ಮೂಲ ಆಶಯ ಗಳನ್ನು ಸೃಷ್ಟಿಸಿ ಬೆಳೆಸಿ ಪೋಷಿಸಿದ ಕೀರ್ತಿ ವಚನ ಚಳವಳಿಗಿದೆ. ಪ್ರಜಾಪ್ರಭುತ್ವದತತ್ತ್ವಗಳಾದ ಧಾರ್ಮಿಕ ಸಮಾನತೆ ಸ್ತ್ರೀ ಸಮಾನತೆ ನೈತಿಕ ಸಮಾನತೆ ಆರ್ಥಿಕ ಸಮಾನತೆ ಶೈಕ್ಷಣಿಕ ಸಮಾನತೆ ರಾಜಕೀಯ ಸಮಾನತೆ ಇನ್ನೂ ಮುಂತಾದ ಮಾನವೀಯ ಮೌಲ್ಯಗಳುಳ್ಳ ಸಮಾನತೆಯ ತತ್ತ್ವಗಳನ್ನು ಬಸವಾದಿಶರಣರು ಆ ಕಾಲದಲ್ಲೇ ಜನಮಾನಸದಲ್ಲಿ ಬಿತ್ತಿದ್ದರು ಕರ್ನಾಟಕದ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನ ಒಂದು ವಿಶಿಷ್ಟವಾದ ಕಾಲಘಟ್ಟ.ಜಡ್ಡು ಹಿಡಿದಿದ್ದ ಸಮಾಜಕ್ಕೆ ವೈಚಾರಿಕ ಸ್ಪರ್ಶ ನೀಡುವ ಮೂಲಕ ಹೊಸ ಸಮಾಜದ ಸೃಷ್ಟಿಯ ಕನಸನ್ನು ಕಂಡಂತಹ ಶರಣರು ಬಸವಣ್ಣನವರ ನೇತೃತ್ವದಲ್ಲಿ ನಡೆಸಿದಂತಹ ಕ್ರಾಂತಿ ಪರಿಪೂರ್ಣವಾದುದು ಬಸವಣ್ಣನವರ ಸಾರಥ್ಯದಲ್ಲಿ ನಡೆದ ಸುಧಾರಣೆಯ ಪ್ರಯತ್ನ ಸಾಮಾಜಿಕ ಚಳವಳಿಯಾಗಿ ರೂಪುಗೊಂಡು ಸಾಮಾನ್ಯ ಬದುಕಿನ ಎಲ್ಲಾ ಸ್ತರಗಳು ಚಳುವಳಿಯ ಭಾಗವಾಗಿದ್ದು ಶರಣರ ಪೂರ್ಣ ದೃಷ್ಟಿಯ ಸಂಕೇತ.ಜ್ಯಾತ್ಯಾತೀತ ಸಮಾಜದ ಕನಸು ಬಸವಣ್ಣನವರದ್ದಾಗಿತ್ತು.

ಏಕೆಂದರೆ ಆ ಕಾಲದ ಸಮಾಜದಲ್ಲಿ ನಡೆಯುತ್ತಿದ್ದ ಶೋಷಣೆ ಮಹಿಳೆಯರ ಮೇಲೆ ನಡೆಯುತ್ತಿದ್ದ ಕ್ರೌರ್ಯ ಇವೆಲ್ಲವನ್ನೂ ಘಾಸಿಗೊಳಿಸಿದ್ದವು.ಈ ಎಲ್ಲವನ್ನು ಅರಿತ ಬಸವಣ್ಣನವರು ಇಂತಹ ಬದಲಾವಣೆಗೆ ಬರಹವೇ ಮುಖ್ಯವೆಂದು ಅರಿತು ಎಲ್ಲಾ ಜಾತಿಯ ಜನರನ್ನು ಒಟ್ಟುಗೂಡಿಸಿ ಅವರನ್ನು ಒಂದೇ ವೇದಿಕೆಯಲ್ಲಿ ತಂದು ಶರಣರು ಎಂಬ ಮಾನವ ಧರ್ಮದ ಅಡಿಯಲ್ಲಿ ಕೂಡಿಸಿ ಬರಹದ ಮೂಲಕ ಬದಲಾವಣೆ ಮಾಡಲು ಬಯಸಿದರು.ಅದರಲ್ಲಿ ಯಶಸ್ವಿಯಾದರು. ಬರಹವೇ ಬದಲಾವಣೆಗೆ ನಾಂದಿಯಾಯಿತು ಚಳವಳಿಯಾಗಿ ರೂಪುಗೊಂಡು ಸಮಾಜ ಬದಲಾವಣೆಯಲ್ಲಿ ಪ್ರಮುಖ ಪಾತ್ರ ವಹಿಸಿತು.

ಆದರೆ ಈಗಿನ ಸಮಾನತೆ ಕೇವಲ ನೆಪಮಾತ್ರಕ್ಕೆ ಇದೆ ಅಂದರೆ ಲೋಕತಂತ್ರಕ್ಕೆ ಮಾತ್ರ ಸೀಮಿತವಾಗಿದೆ. ಎನ್ನುವುದಂತೂ ಸತ್ಯ ಹಾಗಾಗಿ ಲೋಕ ತಂತ್ರವೂ ಸ್ವತಂತ್ರವಾಗಿ ನಿಷ್ಪಕ್ಷಪಾತವಾಗಿ ಕೆಲಸ ಮಾಡಲು ವಚನ ಸಾಹಿತ್ಯ ಕಾಲದ ಅನುಭವ ಮಂಟಪ ಮತ್ತು ಶೂನ್ಯ ಸಿಂಹಾಸನದ ಆಶಯಗಳುಳ್ಳ ಪ್ರಜಾಪ್ರಭುತ್ವದಿಂದ ಸಾಧ್ಯ ಎಂದು ಹೇಳಬಹುದು. ಈ ಸನ್ನಿವೇಶವು ದೇಶಕ್ಕೆ ಒಳ್ಳೆಯ ಭವಿಷ್ಯವನ್ನು ತಂದುಕೊಡುತ್ತದೆ ಎಂದು ತಿಳಿದುಕೊಂಡು ನಡೆದರೆ ಅದೊಂದು ಉತ್ತಮ ಹೆಜ್ಜೆ ಎನ್ನಬಹುದು ಹಾಗೆ ಬಸವಣ್ಣನವರು ಕಲ್ಯಾಣದಲ್ಲಿ ಮಾಡಿದ ಎಲ್ಲ ಪ್ರಬಲ ಪ್ರಜಾಪ್ರಭುತ್ವ ಪ್ರಯೋಗಗಳಲ್ಲಿ ಬಹಳಷ್ಟು ಪ್ರಯೋಗಗಳು, ಇಂದಿನ ಶತಮಾನದ ಜಗತ್ತಿನಲ್ಲಿ ನಡೆದ ಮೊದಲ ಪ್ರಯೋಗ ಗಳೇ ಆಗಿವೆ.

ಬಸವಣ್ಣನವರು ಎಲ್ಲಾ ಸಮಾಜಮುಖಿ ಸೇವೆಗಳ ಕಾರ್ಯಕ್ಕೆ ಪರ್ಯಾಯ ವ್ಯವಸ್ಥೆ ಮಾಡಿದರು. ರಾಜ್ಯ ಸಿಂಹಾಸನವನ್ನು ಅವರು ಏರಲಿಲ್ಲ. ಬದಲಾಗಿ ಶೂನ್ಯ ಸಿಂಹಾಸನ ವನ್ನ ಸೃಷ್ಟಿಸಿ ಪ್ರಜಾಪ್ರಭುತ್ವದ ಕನಸು ಬಿತ್ತಿದರು ಅವರ ಅನುಭವ ಮಂಟಪ ದ ಅಮರಗಣಗಳಲ್ಲಿ ಎಲ್ಲಾ ಜಾತಿಯ ಶರಣರಿದ್ದರು. ಮಹಿಳೆಯರಿದ್ದರು ಅವರೆಲ್ಲಾ ಅನುಭವ ಮಂಟಪ ಎಂಬ ಧಾರ್ಮಿಕ ಸಮಾಜೊ ಎಂಬ ಸಂಸತ್ತಿನ ಸದಸ್ಯರಾಗಿದ್ದರು.

ಅಭಿವ್ಯಕ್ತಿ ಸ್ವಾತಂತ್ರ್ಯ ಪಡೆದವರಾಗಿದ್ದರು ಹೀಗೆ ಸ್ವತಂತ್ರ ಧರ್ಮ ಸಮಾನತೆಯ ವಿಚಾರಧಾರೆಯನ್ನು ಜಗತ್ತಿನಲ್ಲಿ ಹರಿಸಿದವರಲ್ಲಿ ಬಸವಣ್ಣನವರು ಪ್ರಥಮರಾಗಿದ್ದರು. ಅವರು ಪ್ರಾರಂಭಿಸಿದ ಚಳವಳಿಯಿಂದಾಗಿ ಮಹಿಳೆಯರು ಅಸ್ಪೃಶ್ಯರು ಕೂಡ ಶರಣರಾದರು.

ಶರಣ ಸಾಹಿತ್ಯ ಮತ್ತು ಸಂವಿಧಾನದ ಆಶಯವು ಒಂದೇ ಆಗಿದೆ ಜಾತಿ ತಾರತಮ್ಯವಿಲ್ಲದ ಸಮಾಜ ನಿರ್ಮಾಣವು ಇವೆರಡರ ಗುರಿಯಾಗಿದೆ. ಸಮಾಜದಲ್ಲಿ ಬದಲಾವಣೆಯನ್ನ ತರಲು ಬಸವೇಶ್ವರರು ಹೋರಾಟ ಮಾಡಿದರು. ಆ ಸಂದರ್ಭದಲ್ಲಿ ಶೂದ್ರ ಸಮುದಾಯ ಮತ್ತು ಮಹಿಳಾ ಸಮುದಾಯ ಶಿಕ್ಷಣದಿಂದ ವಂಚಿತ ಬಡತನ ಮತ್ತು ತಾರತಮ್ಯಕ್ಕೆ ಒಳಗಾದರು. ಇದನ್ನು ಕಂಡ ಬಸವಾದಿಶರಣರು ಅನುಭವ ಮಂಟಪದ ಮೂಲಕ ಜಾತಿ ವ್ಯವಸ್ಥೆಯ ಮೇಲು ಕೀಳಿನ ತಾರತಮ್ಯವನ್ನು ಆಳಿಸಿ ಎಲ್ಲರೂ ಒಂದಾಗಿ ಬಾಳುವಂತಹ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟರು. ಇಂತಹ ಆಶಯಗಳನ್ನ ಇಟ್ಟುಕೊಂಡು ರಚಿತವಾದ ಸಂವಿಧಾನವು ಜಾತಿ ವ್ಯವಸ್ಥೆಯನ್ನು ದೂರ ಮಾಡಿ ಮಹಿಳೆಯರು ಮತ್ತು ಶೂದ್ರರಿಗೆ ಸಮಾನ ಹಕ್ಕುಗಳನ್ನು ಸಮಾನ ಗೌರವವನ್ನು ಹೇಳುವಂತಹ ಮತ್ತು ತಪ್ಪಿದಲ್ಲಿ ಪಡೆದುಕೊಳ್ಳುವಂತಹ ಅತ್ಯುನ್ನತವಾದಂತಹ ಸರ್ವತಂತ್ರ ಸ್ವತಂತ್ರತೆಯನ್ನು ಸಂವಿಧಾನ ಕಲ್ಪಿಸಿದೆ.೧೨ನೇ ಶತಮಾನದಲ್ಲಿ ಬಸವಣ್ಣನವರು ರೂಪಿಸಿದ ವಚನ ಸಾಹಿತ್ಯ ಎಂಬ ಸಂವಿಧಾನದ ಆಶಯಗಳನ್ನೇ ಆಧಾರವಾಗಿಟ್ಟು ಕೊಂಡಿರುವಂತೆ ಡಾ ಬಿಆರ್ ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನವು ಕಂಡುಬರುತ್ತದೆ. ಹಾಗಾಗಿ ವಚನ ಸಾಹಿತ್ಯದಲ್ಲಿರುವ ಎಲ್ಲಾ ಆಶಯಗಳು ನಮ್ಮ ಸಂವಿಧಾನದಲ್ಲಿವೆ ಆ ತರುವಾಯ ಇವತ್ತಿನ ವ್ಯವಸ್ಥೆಯನ್ನ ನೋಡಿದಾಗ ಆ ಕಾಲದ ಬಸವಣ್ಣನವರು ಉತ್ತಮ ಅರ್ಥ ಮಂತ್ರಿಗಳಾಗಿದ್ದರು. ಸಮಾಜಕಲ್ಯಾಣ ಮಂತ್ರಿಗಳಾಗಿದ್ದರು ಶಿಕ್ಷಣ ಮಂತ್ರಿಗಳಾಗಿದ್ದರು.ಆರೋಗ್ಯ ಮಂತ್ರಿಗಳಾಗಿದ್ದರು ಸಮಾಜಕ್ಕೆ ಚಿಕಿತ್ಸೆ ನೀಡಿದ ವೈದ್ಯಕೀಯ ಮಂತ್ರಿಗಳಾಗಿದ್ದರು.ಹಾಗೂ ಉತ್ತಮ ಆಡಳಿತ ನಡೆಸಿದ ಮುಖ್ಯಮಂತ್ರಿ ಗಳಾಗಿದ್ದರು ಎಂದು ಈ ಕಾಲದಲ್ಲಿ ಗುರುತಿಸಬಹುದಲ್ಲವೆ? ಈ ಎಲ್ಲಾ ಹಿನ್ನಲೆಯಲ್ಲಿ ಸರ್ಕಾರವು ಸಮಾಜ ಕಲ್ಯಾಣ ಇಲಾಖೆಯ ನೇತೃತ್ವದಲ್ಲಿ ಸಂವಿಧಾನದ ಜಾಗೃತಿ ಜಾಥಾವನ್ನು ಎಲ್ಲೆಡೆ ಹಮ್ಮಿಕೊಂಡಿರುವುದು ಸ್ವಾಗತಾರ್ಹ ಬೆಳವಣಿಗೆ ಆಗಿದೆ

(ಡಾ. ಆರ್ ನಾಗರಾಜು ಸಾಹಿತಿಗಳು ಮತ್ತು ಸಂಸ್ಕೃತಿ ಚಿಂತಕರು ಮುಖ್ಯಸ್ಥರು ಕನ್ನಡ ವಿಭಾಗ ಬಸವೇಶ್ವರ ಕಲಾ ಮಹಾವಿದ್ಯಾಲಯ ಬಾಗಲಕೋಟೆ ೯೪೪೯೫೨೭೫೪೪)

## ಭಾರತ ಸಂವಿಧಾನವೆಂಬ ಬೆಳಕಿನ ದಾರಿ–ಡಾ.ಹುಲಿಕುಂಟೆಮೂರ್ತಿ

ತನ್ನ ಸಮತೆಯ ಆಶಯದಿಂದ ಜಗತ್ತಿನ ಹೃದಯಗೆದ್ದ ಭಾರತ ಸಂವಿಧಾನಕ್ಕೆ ಈಗ ೭೫ ವರ್ಷ. ಶೋಷಿತರ ಮೇಲಿನ ಸಾವಿರಾರು ವರ್ಷಗಳ ಅನ್ಯಾಯವನ್ನು ಕೊನೆಗಾಣಿಸುವ ತಮ್ಮ ಕನಸಿಗೆ ಸಂವಿಧಾನದ ಮೂಲಕ ರೆಕ್ಕೆ ಕಟ್ಟಿದವರು ಬಾಬಾ ಸಾಹೇಬ್ ಅಂಬೇಡ್ಕರ್. ಅದಕ್ಕಾಗಿ ಅವರು ಸವೆಸಿದ ದಾರಿ ಸುಲಭದ್ದಾಗಿರಲಿಲ್ಲ. ಪ್ರಪಂಚದ ಮೂಲೆ ಮೂಲೆಯ ಸಮತೆಯ ಆಶಯಗಳನ್ನು ಹುಡುಕಿ, ಭಾರತ ನೆಲದ ಶೋಷಣೆಯ ಗಾಯಗಳನ್ನು ಮಾಯಿಸುವ ಮುಲಾಮು ಕಂಡುಹಿಡಿದರು. ಈ ದಾರಿಯಲ್ಲಿ ಅವರು ಇಡೀ ದೇಶವನ್ನೂ ದೇಶದ ಜನರಕಷ್ಟ ಸುಖಗಳನ್ನು ಅಧ್ಯಯನ ಮಾಡಿದರು. ಜಾತಿ ತಾರತಮ್ಯದ ಮೂಲ ಬೇರುಗಳನ್ನು ಶೋಧಿಸಿದರು. ಯಾವ ಔಷಧಿ ಈ ತಾರತಮ್ಯದ ರೋಗವನ್ನು ವಾಸಿ ಮಾಡಬಹುದು ಎಂದು ಮನಗಂಡರು. ಇದೆಲ್ಲದರ ಪ್ರತಿಫಲವಾಗಿ ಭಾರತ ಸಂವಿಧಾನ ಸಿದ್ಧಗೊಂಡಿತು.

ಸಂವಿಧಾನ ಜಾರಿ ಮಾಡುವವರು ಸಮರ್ಥರಾಗಿರಬೇಕು ಎಂದು ಬಾಬಾ ಸಾಹೇಬರು ಕೊನೆಯಲ್ಲಿ ಹೇಳಿ ಹೋದರು. ಅವರು ಹೇಳಿದ್ದು ನಿಜವಾಯಿತು. ಕೊನೆಗೂ ಸಂವಿಧಾನ ದೇಶದ ಜನರ ಬದುಕಿನ ಭಾಗವಾಗದೆ ಆಡಳಿತ ಮಾಡುವವರ ಕಾರರ್ಯಕ್ರಮವಾಯಿತು. ಈ ಕಾರಣದಿಂದ ಸಮಾಜಮುಖಿ ಆಲೋಚನೆಯ ಸರ್ಕಾರಗಳು ತಮ್ಮ ಆಶಯದ ಈಡೇರಿಕೆಗೆ ಸಂವಿಧಾನವನ್ನು ಮುನ್ನಲೆಗೆತರುತ್ತವೆ. ಇದೀಗ ಕರ್ನಾಟಕ ಸರ್ಕಾರ ಸಂವಿಧಾನಕ್ಕೆ ೭೫ ವರ್ಷ ತುಂಬಿದ ಹಿನ್ನೆಲೆಯಲ್ಲಿ ಮನೆ ಮನೆಗೂ ಸಂವಿಧಾನವೆಂಬ ಆಂದೋಲನವನ್ನೇ ಕೈಗೊಂಡಿದೆ. ಇದು ಭಾರತದ ಮಟ್ಟಿಗೆ ನಿಜಕ್ಕೂ ಮಹತ್ವದ ವಿದ್ಯಮಾನ. ಕೋಮುವಾದ, ಜಾತಿವಾದಗಳು ಹೊಸ ರೂಪ ಪಡೆಯುತ್ತಿರವ, ಆ ಮೂಲಕ ಶೋಷಿತರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿರುವ ಕಾಲಘಟ್ಟದಲ್ಲಿ ಸರ್ಕಾರಿ ಇಲಾಖೆಯೊಂದು ಸಂವಿಧಾನವನ್ನು ಹೊತ್ತು ಸಾಗುತ್ತಿರುವುದು ಮಹತ್ತರವಾದುದು. ಇದರಿಂದಾಗಿ ದಶಕಗಳಿಂದ ಸಂವಿಧಾನದ ನೆರಳಿನಲ್ಲಿ ಸಮಾಜಮುಖಿ ಕೆಲಸಗಳನ್ನು ಮಾಡಿಕೊಂಡು ಬಂದಿರುವ ಸಂಘಟನೆಗಳಿಗೆ ಮತ್ತು ಸಂವಿಧಾನವನ್ನು ಹೊಸ ಪರಿಭಾಷೆಯಲ್ಲಿ ಅರ್ಥಮಾಡಿಕೊಳ್ಳಲು ಕಾಯುತ್ತಿದ್ದ ಯುವಜನತೆಗೆ ಹೊಸ ಒಂದು ಬೆಳಕಿನ ದಾರಿ ಸಿಕ್ಕಂತಾಗಿದೆ.

ಕಳೆದ ಏಳೂವರೆ ದಶಕದಿಂದ ಭಾರತದಲ್ಲಾದ ಸಾಮಾಜಿಕ ಬದಲಾವಣೆಗಳ ಹಿಂದೆ ಭಾರತ ಸಂವಿಧಾನದ ಪಾಲಿದೆ. ಸಂವಿಧಾನ ರೂಪಿತವಾಗಿ ಅಂಗೀಕಾರಗೊಂಡ ಇಪ್ಪತ್ತೈದು ವರ್ಷಗಳ ನಂತರ ಕರ್ನಾಟಕದಲ್ಲಿ ರೈತಸಂಘ ಮತ್ತು ದಲಿತ ಸಂಘರ್ಷ ಸಮಿತಿಗಳು ಜನ್ಮತಾಳಿದವು. ಈ ಎರಡೂ ಚಳವಳಿಗಳ ಜೊತೆ ಜೊತೆಗೆ ಕಾರ್ಮಿಕ ಹೋರಾಟಗಳು, ಮಹಿಳಾ ಹೋರಾಟಗಳೂ, ವಿದ್ಯಾರ್ಥಿ ಹೋರಾಟಗಳೂ ನಡೆದು ಕರ್ನಾಟಕ ಮಣ್ಣಿನ ಪ್ರತಿಭಟನಾತ್ಮಕ ವಿವೇಕವನ್ನು ಕಾಪಿಟ್ಟುಕೊಂಡವು. ಈ ಎಲ್ಲಾ ಚಳವಳಿಗಳೂ ಆತ್ಯಂತಿಕವಾಗಿ ಅವಲಂಭಿಸಿದ್ದು ನಮ್ಮ ಸಂವಿಧಾನವನ್ನೇ. ಆಳುವ ಪಕ್ಷಗಳು ಸಂವಿಧಾನದ ಆಶಯಗಳ ವಿರುದ್ಧ ನಡೆದುಕೊಂಡಾಗ ಎಚ್ಚರಿಸುವ, ಜನರಿಗೆ ಅರಿವು ಮೂಡಿಸುವ ಕೆಲಸಗಳನ್ನು ಈ ಚಳವಳಿಗಳು ಮಾಡುತ್ತಾ ಬಂದಿವೆ. ಈ ಕಾರಣದಿಂದಾಗಿ ಆಳುವವರು ಕೋಮುವಾದಿಗಳು, ಜಾತಿವಾದಿಗಳಾಗಿದ್ದರೂ ಸಾಂವಿಧಾನಿಕ ನಡವಳಿಕೆಗಳನ್ನು ಅನಿವಾರ್ಯವಾಗಿ ರೂಡಿಸಿಕೊಳ್ಳಬೇಕಾಯಿತು.

ಕಾಲ ಸರಿದಂತೆ ತಾರತಮ್ಯಗಳಾಚೆಗಿನ ಸಮತೆಯ ಸಮಾಜವೊಂದು ರೂಪುಗೊಳ್ಳಬಹುದು ಎಂಬ ಹಿರಿಯರ ಕನಸು ಈಗ ವಿಫಲವಾಗಿದೆ. ಜಾತಿ ಧರ್ಮಗಳ ಹೆಸರಿನಲ್ಲೇ ಅಸಾಂವಿಧಾನಿಕ ಕೃತ್ಯಗಳು ನಡೆಯುತ್ತಿವೆ. ದಲಿತ– ಮಹಿಳೆಯರ– ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳು ಹಿಂದೆಂದಿಗಿಂತಲೂ ಹೆಚ್ಚಾಗುತ್ತಿವೆ. ವ್ಯವಸ್ಥಿತವಾಗಿ ಸಂವಿಧಾನವನ್ನು ಜನರ ನಂಬಿಕೆಯಾಚೆಗೆತಳ್ಳುವ, ಅದರ ಮೂಲ ಆಶಯಗಳಾದ ಧರ್ಮ ನಿರಪೇಕ್ಷತೆ ಮತ್ತು ಬಂಧುತ್ವವನ್ನು,ಧರ್ಮವಿರೋಧ ಎಂಬಂತೆ ಬಿಂಬಿಸುವ ಸಮಾಜ ವಿರೋಧಿಗಳ ಕೆಲಸ ಸ್ವಲ್ಪಮಟ್ಟಿಗೆ ಸಫಲವಾಗುತ್ತಿದೆ. ಈ ಕಾಲದಲ್ಲಿ ಮುನ್ನಲೆಗೆ ಬರಬೇಕಿದ್ದ ನಿರುದ್ಯೋಗ, ಜಾತೀಯತೆ, ಲಿಂಗತಾರತಮ್ಯ ಮತ್ತು ಶೈಕ್ಷಣಿಕ ಆಶಯಗಳು ಹಿನ್ನೆಲೆಗೆ ಸರಿದು ಧರ್ಮ ಮತ್ತು ಕ್ರೂರ ಜಾತೀಯತೆಗಳು ಮೆರೆಯುತ್ತಿವೆ. ಈ ಸಂದರ್ಭವನ್ನು ಸಂವಿಧಾನದ ಜೊತೆಗೇ ಎದುರಿಸಬೇಕಾಗಿದೆ. ಯಾಕೆಂದರೆ, ಸಂವಿಧಾನದಲ್ಲಿ ಮಾತ್ರವೇ ಸಹಜ– ಸಹಬಾಳ್ವೆಯ ಮಾದರಿಗಳಿವೆ. ಮೈತ್ರಿ–ಕಾರುಣ್ಯದ ಆಶಯಗಳಿವೆ. ಸಹಜೀವಿಗಳನ್ನು ತಮ್ಮಂತೆ ಕಾಣುವ, ಎಂತಹಾ ಸಂದರ್ಭದಲ್ಲೂ ವ್ಯಕ್ತಿ ಘನತೆಯನ್ನು ಕಾಪಾಡಿಕೊಳ್ಳುವ, ಇನ್ನೊಬ್ಬರ ಬದುಕುಗಳನ್ನು ಮುರುಟಿ ಹೋಗದಂತೆ ತಡೆಯುವ ಕ್ರಿಯಾತ್ಮಕ ಪಾಠಗಳಿವೆ ಮತ್ತು ಎದೆಯಾಳದ ಆಶಯಗಳೇ ನಮ್ಮನ್ನು ಕೈಹಿಡಿದು ನಡೆಸುವ ಬದುಕಿನ ಕ್ರಮವಿದೆ. ಈ ಕಾರಣಕ್ಕಾದರೂ ನಮ್ಮ ಸಂವಿಧಾನ ನಮ್ಮೆಲ್ಲರ ಬದುಕಿನ ಮೂಲ ಬಿತ್ತಿಯಾಗಬೇಕಿದೆ.

ಈ ಕಾರಣಕ್ಕಾಗಿ ನಾವು ಬದುಕುತ್ತಿರುವ ಕಾಲ ಮತ್ತು ದೇಶದ ಧರ್ಮ ಸಂವಿಧಾನವಾಗಬೇಕಾಗಿದೆ . ಕೊಲ್ಲುವ ಬಾಷೆಗೆ ಉತ್ತರವಾಗಿ, ಹೊಸಹತಾರಗಳೊಂದಿಗೆ ನಮ್ಮೆದುರು ನಿಂತಿರುವ ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ಶಕ್ತಿಗಳ ವಿರುದ್ಧದ ಒಡಲ ಹಾಡಾಗಿ ನಮ್ಮ ಸಂವಿಧಾನ ಹೊಮ್ಮಬೇಕಿದೆ. ಭೂಮಿ– ವಸತಿ– ಉದ್ಯೋಗ ವಂಚಿತರ, ಜಾತಿಯ ಕಾರಣಕ್ಕೆ ದೌರ್ಜನ್ಯಕ್ಕೆ ತುತ್ತಾದವರ, ಜಗತ್ತಿನ ಅರ್ದದಷ್ಟು ಜನಸಂಖ್ಯೆಯಿದ್ದರೂ ದ್ವಿತೀಯ ದರ್ಜೆಯ ಬದುಕನ್ನು ನಡೆಸುತ್ತಿರುವ ಮಹಿಳೆಯರ ಕಣ್ಣ ದಾರಿಯಾಗಿ ನಮ್ಮ ಸಂವಿಧಾನ ರೂಪು ತಳೆಯಬೇಕಾಗಿದೆ. ಆ ಮೂಲಕ ಭಾರತಕ್ಕೆ ಅಂಟಿರುವ ಅಸಮಾನತೆಯ ಕಳಂಕವನ್ನು ತೊಳೆಯಬೇಕಿದೆ.

ಮನೆ ಮನೆಗೂ ಸಂವಿಧಾನ ಎಂದರೆ, ಕೇವಲ ಸಂವಿಧಾನದ ಆಶಯಗಳ ಅಕ್ಷರ ರೂಪವಲ್ಲದೆ ಗತಿಯಿಲ್ಲದವರ ಊರುಗೋಲಾಗಬೇಕಿದೆ. ಕರ್ನಾಟಕ ಸರ್ಕಾರ ಸಮಾಜಮುಖಿ ಕಾರ್ಯಕ್ರಮಗಳೊಟ್ಟಿಗೆ ಸಂವಿಧಾನವನ್ನು ಮನೆಮನೆಗಳಿಗೆ ತಲುಪಿಸುತ್ತಿರುವುದು ಮಹತ್ತರವಾರ ಸಂಗತಿ. ಯಾಕೆಂದರೆ ಆಶಯಗಳನ್ನು ಅಕ್ಷರರೂಪದಲ್ಲಿ ಮಾತ್ರವೇ ಹೊಂದಿರುವ ಬೃಹತ್ ಜನ ಸಮುದಾಯ ನಮ್ಮದು. ಆಡಿದ ಮಾತುಗಳು ಗಂಟಲಿನಂದ ಹೊರಟು ಗಾಳಿಯಲ್ಲಿಲಯವಾಗಿ ಬಿಡುವ ಮತ್ತು ಅಸಮಾನತೆಯನ್ನು ಇದ್ದ ಹಾಗೆ ಉಳಿಸಿಕೊಳ್ಳುವ ಪ್ರಕ್ರಿಯೆಗಳು ಇಲ್ಲಿಯವರೆಗೆ ನಮ್ಮನ್ನುದಿಕ್ಕೆಡಿಸಿವೆ. ಈಗ ಮಾತುಗಳು ದೀಪದ ರೂಪತಾಳುವ ಹೊತ್ತು. ಆ ಬೆಳಕಿನಲ್ಲಿ ನಾವು ನಮ್ಮ ಸಂವಿಧಾನವನ್ನೂ, ಆ ಮೂಲಕ ಸಮಾನತೆಯನ್ನೂ ಬದುಕಿನಲ್ಲಿ ಅಳವಡಿಸಿಕೊಳ್ಳುವಮಹದವಕಾಶ ನಮ್ಮ ಮನೆ ಬಾಗಿಲಲ್ಲಿದೆ.

## 'ನಮ್ಮ ಸಂವಿಧಾನ: ಆಶಯ ಮತ್ತು ಆಚರಣೆ– ಮೇಟಿ ಮಲ್ಲಿಕಾರ್ಜುನ

ಸಮೂಹಗಳು ಎದುರಿಸುತ್ತಿರುವ ತೊಡಕುಗಳು:
ವಿರೋಧಾಭಾಸಗಳಿಂದ ಕೂಡಿದ ಜೀವನವನ್ನು ನಾವು ಪ್ರವೇಶಿಸಲಿದ್ದೇವೆ' ಎಂಬ ಈ ಮುನ್ನೆಚ್ಚರಿಕೆಯ ಮಾತನ್ನು ಬಾಬಾ ಸಹೇಬ್ ಅಂಬೇಡ್ಕರ್ ಅವರು ಭಾರತದ ಸಂವಿಧಾನವನ್ನು ಅಂಗೀಕರಿಸುವ ಸನ್ನಿವೇಶದಲ್ಲಿ ಹೇಳಿದ್ದರು. ಅಂದರೆ ರಾಜಕೀಯವಾಗಿ ನಾವು ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿದ್ದರೂ, ಆರ್ಥಿಕವಾಗಿ ಬಂಡವಾಳಶಾಹಿತ್ವವನ್ನು ಹಾಗೂ ಸಾಮಾಜಿಕವಾಗಿ ವರ್ಣ ವ್ಯವಸ್ಥೆ ಅಥವಾ ಧರ್ಮವನ್ನು ಒಪ್ಪಿಕೊಂಡಿರುವುದನ್ನು ಬಾಬಾ ಸಹೇಬರ ಈ ಮೇಲಿನ ಮಾತು ನಿಚ್ಚಳಪಡಿಸುತ್ತದೆ. ಹಾಗಾಗಿಯೇ ರಾಜಕೀಯ ಜೀವನದಲ್ಲಿ ನಾವು ಸಮಾನತೆಯನ್ನು ಹೊಂದಿದ್ದರು, ಸಾಮಾಜಿಕ ಮತ್ತು ಆರ್ಥಿಕ ಬದುಕಿನಲ್ಲಿ ಮಾತ್ರ ಅಸಮಾನತೆಯನ್ನು ಇವತ್ತಿಗೂ ಅನುಭವಿಸುತ್ತಿದ್ದೇವೆ. ಪರಿಣಾಮವಾಗಿ ಒಬ್ಬ ವ್ಯಕ್ತಿ ಒಂದು ಮತ ಮತ್ತು ಒಂದು ಮತ ಒಂದು ಮೌಲ್ಯ ಎಂಬ ತತ್ವವನ್ನು ರಾಜಕೀಯದಲ್ಲಿ ಗುರುತಿಸಿದಂತೆ, ಸಾಮಾಜಿಕ ಮತ್ತು ಆರ್ಥಿಕ ಬದುಕಿನಲ್ಲಿ ಗುರುತಿಸಲು ಇಂದಿಗೂ ನಮಗೆ ಸಾಧ್ಯವಾಗಿಲ್ಲ. ಏಕೆಂದರೆ ಈಗಾಗಲೇ ನೆಲೆನಿಂತಿರುವ ಸಾಮಾಜಿಕ ಮತ್ತು ಆರ್ಥಿಕ ರಚನೆಗಳ ಪರಿಣಾಮದಿಂದ ಒಬ್ಬ ವ್ಯಕ್ತಿ ಒಂದು ಮೌಲ್ಯ ಅನ್ನುವ ತತ್ವವನ್ನೇ ಸಂಪೂರ್ಣವಾಗಿ ಸಮೂಹಗಳಲ್ಲಿ ನಿರಾಕರಿಸಲಾಗಿದೆ.

ಇಂತಹ ವೈರುಧ್ಯ ಇಲ್ಲವೇ ವಿರೋಧಾಭಾಸಗಳನ್ನು ಮೀರಿ "ನಾವು ಭಾರತೀಯರು" ಅನ್ನುವ ಒಗ್ಗಟ್ಟನ್ನು ಮೆರೆಯಲು, ಅರಾಜಕತೆಯ ರೂಢಿಗಳನ್ನು ತ್ಯಜಿಸಬೇಕು, ವ್ಯಕ್ತಿ ಆರಾಧನೆಯನ್ನು ಕೈಬಿಡಬೇಕು ಮತ್ತು ಕೇವಲ ರಾಜಕೀಯ ಪ್ರಜಾಪ್ರಭುತ್ವವನ್ನು ಮಾತ್ರ ನೆಲೆಗೊಳಿಸುವ ಬದಲಾಗಿ ಸಾಮಾಜಿಕ ಪ್ರಜಾಪ್ರಭುತ್ವವನ್ನು ಒಡಮೂಡಿಸುವ ಕಡೆಗೆ ನಮ್ಮ ಗಮನವನ್ನು ಹರಿಸಬೇಕಿದೆ ಎಂದು ೧೯೪೯ ನವೆಂಬರ್ ೨೫ ರಂದು ಸಂವಿಧಾನ ಸಭೆಯ ಕೊನೆಯ ಭಾಷಣದಲ್ಲಿ ಡಾ. ಅಂಬೇಡ್ಕರ್ ಅವರು ನೀಡಿದ ಈ ಮೂರು ಎಚ್ಚರಿಕೆಗಳನ್ನು ಪ್ರಸ್ತುತ ಸನ್ನಿವೇಶದಲ್ಲಿ ಅರಿಯಬೇಕಾದ ಜರೂರಿದೆ. ಭಾರತದಂತಹ ದೇಶದಲ್ಲಿ ವ್ಯಕ್ತಿ ಪೂಜೆ, ಅರಾಜಕತೆಯ ನಿಲುವುಗಳು ಹಾಗೂ ರಾಜಕೀಯ ಪ್ರಜಾಪ್ರಭುತ್ವದ ನೆಲೆಗಳು ಹೇಗೆ ಅಸ್ತಿತ್ವವನ್ನು ಪಡೆದುಕೊಳ್ಳುತ್ತಿವೆ ಎಂಬುದನ್ನು ನಿಗಾವಹಿಸಿ ನೋಡಬೇಕಾಗಿದೆ.

ಪ್ರಜಾಪ್ರಭುತ್ವದ ಆಶಯ ಮತ್ತು ಆಚರಣೆಗಳ ನಡುವಣ ಅಂತರ ಇಲ್ಲವೇ ಕಂದಕಗಳನ್ನು ಅರಿಯುವುದೆಂದರೆ ಸಂವಿಧಾನದ ಬಗೆಗಿನ ಎಚ್ಚರ ಮತ್ತು ಅರಿವನ್ನು ಹೊಂದುವುದೇ ಆಗಿರುತ್ತದೆ. ಕಳೆದ ಏಳು ದಶಕಗಳಿಂದ ನಾವು ಅನುಸರಿಸಿಕೊಂಡು ಬಂದಿರುವುದು ಬಹುತೇಕವಾಗಿ ರಾಜಕೀಯ ಪ್ರಜಾಪ್ರಭುತ್ವದ ಪ್ರಸರ್ಶನವೇ ಆಗಿರುತ್ತದೆ. ಹಾಗಾಗಿ ವ್ಯಕ್ತಿ ಮತ್ತು ಸಮುದಾಯಗಳ ಅಂತರ್ನಹಿತ ಘನತೆಯನ್ನು ಕಾಪಾಡುವ ಬಗೆಗಳು ಎಂತಹವು ಅನ್ನುವುದು ನಮ್ಮ ಅರಿವೆ ಬರಲೇ ಇಲ್ಲ. ಕೋಮುವಾದ ತಾಂಡವಾಡುತ್ತಿರುವ ಈ ಸನ್ನಿವೇಶದಲ್ಲಾದರೂ ನಮ್ಮ ಸಂವಿಧಾನದ ಆಶಯಗಳನ್ನು ಮನವರಿಕೆ ಮಾಡಿಕೊಳ್ಳಬೇಕಿದೆ.

**ಸಂವಿಧಾನದ ಆಶಯಗಳು:**
ಸಂವಿಧಾನ ಮುಖ್ಯ ಏಕೆಂದರೆ, ಜನಾಭಿಪ್ರಾಯ ಮತ್ತು ಜನರ ಪ್ರಾತಿನಿಧ್ಯದ ಆಧಾರದ ಮೇಲೆ ನಿರ್ಧಾರಗಳನ್ನು ತೆಗೆದುಕೊಳ್ಳುವ ಭರವಸೆಯನ್ನು ನಮ್ಮ ಜನನಾಯಕರಿಗೆ ಮತ್ತು ಅಧಿಕಾರ ಕೇಂದ್ರದಲ್ಲಿ ಇರುವವರಿಗೆ ಇದು ನೀಡುತ್ತದೆ. ಇಂತಹ ಅಧಿಕಾರವನ್ನು ಹೊಂದಿರುವ ಮತ್ತು ಅದನ್ನು ಜನರ ಮೇಲೆ ಚಲಾಯಿಸುವ ಪ್ರತಿಯೊಬ್ಬರೂ, ಯಾವ ರೀತಿಯಲ್ಲಿ ಆಯಾ ಜನರಿಗೆ ಉತ್ತರದಾಯಿಗಳು ಆಗಿರಬೇಕು ಅನ್ನುವುದನ್ನು ಇದು ವಿವರಿಸುತ್ತದೆ. ವ್ಯಕ್ತಿ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಖಾತರಿಪಡಿಸುವಲ್ಲಿ ನಮ್ಮ ಸಂವಿಧಾನದ ಪಾತ್ರ ಅಗಾಧವಾಗಿದೆ ಅನ್ನುವುದು ಅತ್ಯಂತ ಗಮನಾರ್ಹವಾದ ಸಂಗತಿ. ಸಮಾನತೆ, ಸ್ವಾತಂತ್ರ್ಯ ಮತ್ತು ಮಾನವ ಘನತೆಯನ್ನು ಕಾಪಾಡುವಲ್ಲಿ ಈ ಹಕ್ಕುಗಳು ಹೇಗೆ ಒತ್ತಾಸೆಯಾಗಬಲ್ಲವು ಅನ್ನುವ ವಿವೇಕವನ್ನೂ ಈ ನಮ್ಮ ಸಂವಿಧಾನ ನೆಲೆಗೊಳಿಸುತ್ತದೆ. ಒಕ್ಕೂಟ (ಕೇಂದ್ರ) ಸರಕಾರ ಮತ್ತು ರಾಜ್ಯ ಸರ್ಕಾರಗಳ ಅಧಿಕಾರ ವ್ಯಾಪ್ತಿ ಮತ್ತು ವಿಕೇಂದ್ರೀಕರಣದ ಸ್ವರೂಪವನ್ನು ಸಂವಿಧಾನ ಅತ್ಯಂತ ನಿಚ್ಚಳವಾಗಿ ಅರ್ಥೈಸುತ್ತದೆ. ಅಷ್ಟೆ ಅಲ್ಲದೇ ಭಿನ್ನ ರಾಜಕೀಯ ದೃಷ್ಟಿಕೋನಗಳನ್ನು ಹೊಂದುವ ಅವಕಾಶವನ್ನು ಸಂವಿಧಾನ ಅನುಮೋದಿಸುತ್ತದೆಯೇ ಹೊರತು ಅದು ಆರೋಪಿಸುವುದಿಲ್ಲ. ಸಂವಿಧಾನವೆಂದರೆ ಒಪ್ಪಿಗೆಯೇ ಆಗಿರುತ್ತದೆ ಹಾಗಾಗಿ ಅದೊಂದು ಹೇರಿಕೆ ಆಗುವ ಯಾವ ಸಾಧ್ಯತೆಯೂ ಇಲ್ಲ.

**ಸಂವಿಧಾನ ಸಾಕಾರಗೊಳ್ಳುವ ಬಗೆ:**
ನಮ್ಮ ಸಾಮಾಜಿಕ ಮತ್ತು ಆರ್ಥಿಕ ಉದ್ದೇಶಗಳನ್ನು ಸಾಧಿಸಲು ಈ ಸಂವಿಧಾನಾತ್ಮಕ ವಿಧಾನಗಳು ಒತ್ತಾಸೆಯಾಗುತ್ತವೆ. ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಕಾಪಾಡಿಕೊಳ್ಳುವುದೆಂದರೆ ಸಮುದಾಯಗಳಲ್ಲಿ ಅಹಿಂಸಾತ್ಮಕ ಮನೋಬಲವನ್ನು ರೂಪಿಸಿಕೊಳ್ಳುವುದು. ಇದರರ್ಥ ಸಮುದಾಯಗಳ ನಡುವೆ ನಾಗರಿಕ ಸಹಕಾರ, ಪರಸ್ಪರ ತಾಳಿಕೆಯ ಗುಣ ಮತ್ತು ಸತ್ಯಾಗ್ರಹದ ವಿಧಾನವನ್ನು ಅನುಸರಿಸುವ ನಿಲುವುಗಳು ಅಸ್ತಿತ್ವವನ್ನು ಪಡೆಯಬೇಕಿದೆ. ಆರ್ಥಿಕ ಮತ್ತು ಸಾಮಾಜಿಕ ಉದ್ದೇಶಗಳನ್ನು ಸಾಧಿಸಲು ಸಂವಿಧಾನಾತ್ಮಕ ವಿಧಾನಗಳಿಗೆ ಹೊರತಾದ ಬೇರೆ ಯಾವುದೇ ಮಾರ್ಗವಿರುವುದಿಲ್ಲ. ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಪ್ರಕಾರ ಅಸಂವಿಧಾನಾತ್ಮಕ ವಿಧಾನಗಳಿಗೆ ಸಾಕಷ್ಟು ಸಮರ್ಥನೆ ಹಿಂದೆಯೂ ಇತ್ತು ಮತ್ತು ಇವತ್ತಿಗೂ ಇದೆ. ಆದರೆ ಸಂವಿಧಾನಾತ್ಮಕ ವಿಧಾನಗಳು ಸಾಮಾಜಿಕ ವಿವೇಕ ಮತ್ತು ಸಮೂಹಗಳ ಅನುಭವವಾಗಿ ನೆಲೆಗೊಂಡರೆ, ಸಮಾನ ನ್ಯಾಯ, ಸ್ವಾತಂತ್ರ್ಯ ಮತ್ತು ಬಾಂಧವ್ಯವನ್ನು ಸಾಕಾರಗೊಳಿಸಲು ನಮಗೆ ಸಾಧ್ಯವಾಗುತ್ತದೆ. ಸಂವಿಧಾನದಲ್ಲಿ ಒಡಮೂಡಿದ ಪ್ರತಿಯೊಂದು ಆಶಯವು ಈ ದೇಶದ ಪ್ರತಿ ವ್ಯಕ್ತಿಯ ಬದುಕಿನ ಹಕ್ಕು ಮತ್ತು ಘನತೆಯನ್ನು ಎತ್ತಿಹಿಡಿಯುವ ಮಾಧ್ಯಮವಾಗಿ ಸಂವಿಧಾನ ನಮಗೆ ಒದಗಿ ಬಂದಿದೆ. ಅಂದರೆ ಸಮುದಾಯಗಳ ಏಳ್ಗೆಯನ್ನು ಕಾಪಾಡುವ ಮತ್ತು ಅವುಗಳ ಕೈಹಿಡಿದು ನಡೆಸುವ ಊರುಗೋಲಾಗಿ ಸಂವಿಧಾನ ನಮಗೆ ಒದಗಿಬರಬೇಕು. ಆಶಯ ಮತ್ತು ಆಚರಣೆಗಳ ನಡುವಣ ಅಂತರಗಳು ನಾಶಗೊಳ್ಳದೇ ಸಮೂಹಗಳ ವಿಕಾಸ ನೆರವೇರಲು ಸಾಧ್ಯವಿಲ್ಲ. ರಾಜಸತ್ತೆಯ ಪ್ರಾಬಲ್ಯದಿಂದ ಬಿಡುಗಡೆಗೊಳಿಸಿ ಪ್ರಜಾಸತ್ತೆಯ ನಡೆಗಳನ್ನು ನಿರಂತರವಾಗಿ ನೆಲೆಗೊಳಿಸಲು ನಮ್ಮ ಸಂವಿಧಾನ ದಾರಿದೀಪವಾಗಿ ಪರಿಣಮಿಸಬೇಕಿದೆ.

# ಸಂವಿಧಾನ ಕುರಿತು ವಿಶೇಷ ಲೇಖನಗಳು

## ನಮ್ಮ ಸಂವಿಧಾನದ ಜೀವಾಳ : ಧರ್ಮನಿರಪೇಕ್ಷತೆ– ಜಿ.ಪಿ.ಬಸವರಾಜು

ಬೆಂಗಳೂರು ನಗರ ಜಿಲ್ಲೆ, ಫೆ ೧೪ :ನಮ್ಮದು ಧರ್ಮನಿರಪೇಕ್ಷ ರಾಷ್ಟ್ರ. ಯಾವ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೂ, ಈ ಧರ್ಮನಿರಪೇಕ್ಷ ಎನ್ನುವ ಮಾತು ಎಂದಿಗೂ ಬೇರೆ ಬೇರೆ ಅರ್ಥಗಳಿಗೆ ಎಡೆಮಾಡಿಕೊಡುವುದಿಲ್ಲ. ನಮ್ಮ ಸಂವಿಧಾನ ಇದನ್ನು ಸ್ಪಷ್ಟವಾಗಿ ತಿಳಿಸಿದೆ.

ಒಂದು ರಾಷ್ಟ್ರ, ಒಂದು ಭಾಷೆ, ಒಂದು ಸಂಸ್ಕೃತಿ, ಒಂದು ಧರ್ಮ ಇರುವ ರಾಷ್ಟ್ರಗಳಲ್ಲಿ ಧರ್ಮನಿರಪೇಕ್ಷ ಎನ್ನುವ ಪದಕ್ಕೆ ಅರ್ಥ ಇಲ್ಲದೆ ಇರಬಹುದು. ಅಲ್ಲಿ ಒಂದು ಧರ್ಮ, ರಾಷ್ಟ್ರಧರ್ಮವಾಗಿ ಮೆರೆಯಬಹುದು. ಒಂದು ಭಾಷೆ ರಾಷ್ಟ್ರಭಾಷೆಯೂ ಆಗಿ ಗೌರವ ಪಡೆಯಬಹುದು. ಆದರೆ ನಮ್ಮ ರಾಷ್ಟ್ರದಲ್ಲಿ ಅದು ಸಾಧ್ಯವಾಗುವ ಮಾತಲ್ಲ. ಇಲ್ಲಿ ಯಾವ ಧರ್ಮವೂ ರಾಷ್ಟ್ರಧರ್ಮವಾಗಿ ಮಾನ್ಯವಾಗಲಾರದು. ಅನೇಕ ಧರ್ಮಗಳು ಇಲ್ಲಿ ನೂರಾರು ವರ್ಷಗಳಿಂದ ಜೊತೆಜೊತೆಯಲ್ಲಿ ನಡೆದಿವೆ. ನೂರಾರು ಸಮುದಾಯಗಳು, ಈ ಸಮುದಾಯದ ಭಾಷೆಗಳು, ಸಂಸ್ಕೃತಿಗಳು, ಆಚರಣೆಗಳು, ದೈವಗಳು ಈಗಲೂ ನಮ್ಮ ರಾಷ್ಟ್ರವನ್ನು ಭಾರತವಾಗಿ ರೂಪಿಸಿವೆ. ಇದು ಒಂದು ರಾಜ್ಯದ ರಾಷ್ಟ್ರವಲ್ಲ. ಹಲವು ರಾಜ್ಯಗಳು ಸೇರಿದ ಗಣರಾಜ್ಯ ಭಾರತ. ಈ ವೈವಿಧ್ಯಮಯ ರಾಷ್ಟ್ರವನ್ನು ಹೇಗೆ ಮುನ್ನಡೆಸಬೇಕು, ಯಾವ ನಿಯಮಗಳನ್ನು ಪಾಲಿಸಬೇಕು, ಹೇಗೆ ಎಲ್ಲ ಸಮುದಾಯಗಳಿಗೂ, ವ್ಯಕ್ತಿಗಳಿಗೂ ಸಮಾನತೆ, ಸೋದರತೆ, ಸ್ವಾತಂತ್ರ್ಯ ನ್ಯಾಯಯುತವಾಗಿ ಸಿಕ್ಕಬೇಕು, ಸಮಾಜವಾದಿ ಆಶಯ ಮತ್ತು ಧರ್ಮನಿರಪೇಕ್ಷ ತತ್ವ ಹೇಗೆ ಪಾಲನೆಯಾಗಬೇಕು ಎಂಬುದನ್ನು ಸೂಚಿಸುವ ರಾಷ್ಟ್ರಗ್ರಂಥವೇ ನಮ್ಮ ಸಂವಿಧಾನ.

ವ್ಯಕ್ತಿಯ ಮೂಲಭೂತ ಹಕ್ಕುಗಳು, ಕರ್ತವ್ಯಗಳು, ಹೊಣೆಗಾರಿಕೆಗಳು, ಸಹಬಾಳ್ವೆಯ ಸಾಮರಸ್ಯದ ಬದುಕನ್ನು ನಡೆಸುತ್ತ, ವೈಚಾರಿಕ ನೆಲೆಯಲ್ಲಿ ರಾಷ್ಟ್ರವನ್ನು ಮುನ್ನಡೆಸುವುದು ಹೇಗೆ ಎಂಬ ಸಂಕೀರ್ಣವಾದ ಪ್ರಶ್ನೆಗೆ ನೇರ, ದಿಟ್ಟ, ಸರಳ ಉತ್ತರಗಳು ನಮ್ಮ ಸಂವಿಧಾನದಲ್ಲಿವೆ. ಸಂವಿಧಾನ ಎಂಬುದು ಯಾರೋ ಕೊಟ್ಟ ಕೊಡುಗೆಯಲ್ಲ. ಸ್ವಾತಂತ್ರ್ಯ ಬಂದ ನಂತರ ನಮ್ಮ ಚಿಂತನೆಗಳನ್ನು, ಸಂವಾದಗಳನ್ನು, ಚರ್ಚೆಗಳನ್ನು ಒಟ್ಟುಗೂಡಿಸಿ ಜನರ ಏಳಿಗೆ ಮತ್ತು ಆಡಳಿತಾತ್ಮಕ ವ್ಯವಸ್ಥೆಗಾಗಿ ನಾವು ರೂಪಿಸಿದ ಗ್ರಂಥವೇ ನಮ್ಮ ಸಂವಿಧಾನ.

ಈ ಸಂವಿಧಾನ ರಚನೆಗೆ ಅನೇಕ ಮನಸ್ಸುಗಳು ಹಗಲಿರುಳು ದುಡಿದಿವೆ. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಮಿತಿಯ ಮುಂದಾಳಾಗಿದ್ದರು. ಜಗತ್ತಿನ ಅನೇಕ ಪ್ರಜಾಪ್ರಭುತ್ವ ರಾಷ್ಟ್ರಗಳ ಸಂವಿಧಾನಗಳನ್ನು ಅಧ್ಯಯನ ಮಾಡಿ,ನಮ್ಮ ರಾಷ್ಟ್ರದ ಸಂವಿಧಾನ ಹೇಗಿರಬೇಕೆಂಬ ದಿಕ್ಕನ್ನು ಸೂಚಿಸುವ ಪರಿಣತಿ ಕಾನೂನು ಪಂಡಿತರಾದ ಅಂಬೇಡ್ಕರ್ ಅವರಿಗೆ ಇತ್ತು. ಇದು ಕೇವಲ ಪಾಂಡಿತ್ಯದ ಪ್ರಶ್ನೆಯೂ ಆಗಿರಲಿಲ್ಲ. ಜಾತಿವ್ಯವಸ್ಥೆಯ ಸಮಾಜದಲ್ಲಿ ಅತ್ಯಂತ ಕೆಳ ಸ್ತರದ ಸಮುದಾಯದಲ್ಲಿ ಹುಟ್ಟಿದ ಅಂಬೇಡ್ಕರ್ ಅವರಿಗೆ ನೋವು, ಅಪಮಾನ, ಬಡತನ, ಹೋರಾಟದ ಬದುಕು ಅನುಭವದ ಭಾಗಗಳಾಗಿದ್ದವು. ಹೀಗಾಗಿ ಸಣ್ಣಪುಟ್ಟ ಸಮುದಾಯಗಳಿಗೆ, ತುಳಿತಕ್ಕೊಳಗಾದ ಜನತೆಗೆ ಸಮಾನತೆ, ಘನತೆಯ ಬದುಕು ಮತ್ತು ಮುನ್ನಡೆಯನ್ನು ತಂದುಕೊಡುವುದರ ಕಡೆಗೇ ಬಾಬಾಸಾಹೇಬ್ ಅವರ ಗಮನ ಕೇಂದ್ರೀಕೃತವಾಗಿತ್ತು. ಈ ಕಾರಣದಿಂದಾಗಿಯೇ ನಮ್ಮ ಸಂವಿಧಾನ ಸರ್ವರ ಉದಯದ ಪ್ರಶ್ನೆಯನ್ನೇ ಮುಖ್ಯ ಪ್ರಶ್ನೆಯನ್ನಾಗಿ ಮಾಡಿಕೊಂಡಿತು. ಭಾರತದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯ ಸುರಕ್ಷತೆ, ಸ್ವಾತಂತ್ರ್ಯ, ಸಮಾನತೆ ಮತ್ತು ಜಾತಿಪದ್ಧತಿಯಂಥ ಅನಿಷ್ಟಗಳಿಂದ ಬಿಡುಗಡೆ ನಮ್ಮ ಸಂವಿಧಾನದ ಮುಖ್ಯ ಆಶಯವಾಗಿ ರೂಪಪಡೆಯಿತು.

ನಮ್ಮ ಸಂವಿಧಾನಕ್ಕೆ ತಂದ ೪೨ನೇ ತಿದ್ದುಪಡಿ (೧೯೭೬) ನಮ್ಮದು ಧರ್ಮನಿರಪೇಕ್ಷ ರಾಷ್ಟ್ರ ಎಂಬುದನ್ನು ಮತ್ತೊಮ್ಮೆ ದೃಢವಾಗಿ ಹೇಳಿತು. ಮುಂದೆ ೧೯೯೪ ರಲ್ಲಿ ಎಸ್.ಆರ್.ಬೊಮ್ಮಾಯಿ ವರ್ಸಸ್ ಒಕ್ಕೂಟ ಸರ್ಕಾರ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ನಮ್ಮ ಸಂವಿಧಾನ ರಚನೆಯಲ್ಲಿಯೇ ಧರ್ಮನಿರಪೇಕ್ಷ ತತ್ವ ಅಡಕವಾಗಿದೆ ಎಂದು ಹೇಳಿ ಎಲ್ಲ ಅನುಮಾನಗಳನ್ನು ದೂರಮಾಡಿತು. ಸರ್ಕಾರ ಭಾರತದಲ್ಲಿರುವ ಎಲ್ಲ ಧರ್ಮಗಳನ್ನು ಸಮಾನವಾಗಿ ನೋಡಬೇಕು, ಎಲ್ಲ ಧರ್ಮಗಳನ್ನೂ ಗುರುತಿಸಿ ಗೌರವಿಸಬೇಕು, ಯಾವುದೇ ಧರ್ಮವನ್ನು ತಾರತಮ್ಯದಿಂದ ಕಾಣಬಾರದು ಎಂಬ ಮಾತನ್ನೂ ಹೇಳಿತು. ಇದು ಸಂವಿಧಾನದ ಮುಖ್ಯ ಆಶಯವನ್ನು ಮತ್ತೆ ಮತ್ತೆ ಹೇಳುವುದಕ್ಕೆ ಈ ಪ್ರಕರಣ ದಾರಿಮಾಡಿಕೊಟ್ಟಿತು.

ಇಷ್ಟೆಲ್ಲ ಹಿನ್ನೆಲೆ ಇದ್ದರೂ, ನಮ್ಮ ಕೆಲವು ರಾಷ್ಟ್ರೀಯ ಬಿಜೆಪಿ ನಾಯಕರು ಮತ್ತೆ ಮತ್ತೆ ಹಿಂದೂ ಧರ್ಮವನ್ನು ಚರ್ಚೆಗೆ ಎಳೆದು ತರುತ್ತಿದ್ದಾರೆ. ಹಿಂದೂಗಳು ಹೆಚ್ಚಿನ ಪ್ರಮಾಣದಲ್ಲಿ (ಜನಸಂಖ್ಯೆಯ ಶೇ ೭೯.೮) ಇರುವುದರಿಂದ ನಮ್ಮದು ಹಿಂದೂ ರಾಷ್ಟ್ರ, ನಮ್ಮ ರಾಷ್ಟ್ರೀಯ ಧರ್ಮ ಹಿಂದೂಧರ್ಮ ಎಂಬ ವಾದವನ್ನು ಮಂಡಿಸುತ್ತಿದ್ದಾರೆ. ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವುದು ಭಾಜಪ ಪಕ್ಷ. ಈ ಪಕ್ಷದ ಸಿದ್ಧಾಂತ ಆರ್‌ಎಸ್‌ಎಸ್ ಮತ್ತು ಹಿಂದೂ ಪರಿವಾರ ಸಂಘಟನೆಗಳ ಸಿದ್ಧಾಂತವಲ್ಲದೆ ಬೇರೆ ಅಲ್ಲ. ಈ ಹಿಂದುತ್ವ ಎಂಬ ಪರಿಭಾಷೆಯನ್ನು ರೂಪಿಸಿ ಚಲಾವಣೆಗೆ ತಂದವರು ಸಾವರ್ಕರ್. ೧೯೨೦ ರಲ್ಲಿ. ಇದು ಆರ್‌ಎಸ್‌ಎಸ್ ಹುಟ್ಟಿದ ವರ್ಷವೂ ಹೌದು. ಭಾಜಪ ಮತ್ತು ಪರಿವಾರ ಸಂಘಟನೆಗಳು ನಮ್ಮ ಸಂವಿಧಾನದ ಧರ್ಮನಿರಪೇಕ್ಷ ಸಿದ್ಧಾಂತವನ್ನು ಒಪ್ಪುವುದಿಲ್ಲ.

ಭಾರತೀಯವಾದ, ರಾಷ್ಟ್ರೀಯ ಸಂಸ್ಕೃತಿ ಮತ್ತು ಗುರುತುಗಳನ್ನು ಹಿಂದೂ ಧರ್ಮದಿಂದ ಬೇರ್ಪಡಿಸಲಾಗದು? ಎನ್ನುವ ಮಾತನ್ನು ಆಡುತ್ತ, ಹಿಂದೂ ಧರ್ಮವನ್ನು ವೈಭವೀಕರಿಸುವ ಮತ್ತು ಇತರ ಧರ್ಮಗಳ ಮೇಲೆ ಹಿಂದೂಧರ್ಮವನ್ನು ಹೇರುವ ಹುನ್ನಾರ ನಡೆಯುತ್ತಿದೆ. ಭಾರತವನ್ನು ೧೬ನೇ ಶತಮಾನದಿಂದ ಮುಘಲ್ ದೊರೆಗಳು ಆಳಿದರೆಂಬ ಕಾರಣವನ್ನು ನೀಡಿ, ಮುಸ್ಲಿಂ ದ್ವೇಷವನ್ನು ಬೆಳೆಸಲು ನೋಡಲಾಗುತ್ತಿದೆ. ಇದೆಲ್ಲವನ್ನು ನಮ್ಮ ಸಂವಿಧಾನ ಒಪ್ಪುವುದಿಲ್ಲ. ಯಾವುದೇ ಧರ್ಮ ಎಷ್ಟೇ ದೊಡ್ಡದಾದರೂ ಅದು ಇತರ ಧರ್ಮಗಳ ಮೇಲೆ ಸವಾರಿ ಮಾಡಲು ಅವಕಾಶವನ್ನು ನಾವು ಒಪ್ಪಿಕೊಂಡಿರುವ ಮತ್ತು ನಮಗೆ ನಾವೇ ಕೊಟ್ಟುಕೊಂಡಿರುವ ಸಂವಿಧಾನ ನೀಡುವುದಿಲ್ಲ. ಎಲ್ಲ ಸಣ್ಣಪುಟ್ಟ ಸಮುದಾಯಗಳು, ಭಾಷಿಕ ಗುಂಪುಗಳು, ವಿಭಿನ್ನ ಧರ್ಮಗಳು ಜೊತೆಜೊತೆಯಲ್ಲಿಯೇ ಸಾಗಬೇಕು. ಇವುಗಳನ್ನು ಸಮಾನವಾಗಿ ಕಾಣುವ, ಇವುಗಳ ಘನತೆಗೆ ಧಕ್ಕೆ ಬಾರದಂತೆ ನೋಡಿಕೊಳ್ಳುವ ಹೊಣೆ ಸರ್ಕಾರದ್ದಾಗಿರುತ್ತವೆ.

ನಮ್ಮ ಸಂವಿಧಾನ ಆಡಳಿತ ನಡೆಸುವ ಸರ್ಕಾರಗಳ ನಡೆಯನ್ನು ಸೂಚಿಸುತ್ತದೆ, ನಿಯಂತ್ರಿಸುತ್ತದೆ. ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಅದು ಸಂವಿಧಾನದ ಸೂಚನೆಗಳ ಮೇಲೆಯೇ ನಡೆಯಬೇಕು. ಬಲಪಂಥೀಯ, ಎಡಪಂಥೀಯ ಅಥವಾ ಇನ್ನಾವುದೇ ಸಿದ್ಧಾಂತದ ಪಕ್ಷವಾಗಿರಲಿ, ಅದು ಸಂವಿಧಾನಕ್ಕೆ ತಲೆಬಾಗಲೇ ಬೇಕು. ಇಲ್ಲವಾದರೆ ಸಹಬಾಳ್ವೆ, ಸಹನೆ, ಸಮಭಾವ, ಸರ್ವರ ಉದಯ ಸಾಧ್ಯವಾಗುವುದಿಲ್ಲ. ಇದು ಸಾಧ್ಯವಾಗದಿದ್ದರೆ ಪ್ರಜಾಪ್ರಭುತ್ವವೇ ಉಳಿಯುವುದಿಲ್ಲ. ಈ ಎಚ್ಚರ ಎಲ್ಲರಿಗೂ ಇರಬೇಕಾಗುತ್ತದೆ.

ರಾಜಕೀಯದಿಂದ ಧರ್ಮವನ್ನು ಎಂದೂ ಬೇರ್ಪಡಿಸಬಾರದು ಎಂದು ಗಾಂಧೀಜಿ ಹೇಳುತ್ತಿದ್ದರು. ಆದರೆ ಯಾವುದೇ ಒಂದು ಧರ್ಮವನ್ನು ರಾಜಕೀಯಕ್ಕೆ ಅವರು ತಳುಕು ಹಾಕುತ್ತಿರಲಿಲ್ಲ, ಹಿಂದೂ, ಮುಸ್ಲಿಂ, ಸಿಖ್, ಕ್ರಿಶ್ಚಿಯನ್ ಇತ್ಯಾದಿ ಎಲ್ಲ ಧರ್ಮಗಳ ನೈತಿಕತೆಯೇ ನಿಜವಾದ ಧರ್ಮ; ಈ ಧರ್ಮದಿಂದಲೇ ರಾಜಕೀಯ ನಡೆಯಬೇಕು; ನೈತಿಕತೆ ಇಲ್ಲದ ರಾಜಕೀಯ ರಾಜಕೀಯವೇ ಅಲ್ಲ ಎಂದು ಗಾಂಧಿ ತಮ್ಮ ನಿಲುವನ್ನು ಮಂಡಿಸುತ್ತಿದ್ದರು. ತನ್ನದು ಹಿಂದೂಧರ್ಮವಾದರೂ ತಾನು ಎಲ್ಲ ಧರ್ಮಗಳನ್ನು ಗೌರವದಿಂದ ಮತ್ತು ಸಮಾನತೆಯಿಂದ ನೋಡುತ್ತೇನೆ ಎಂದೂ ಅವರು ಹೇಳುತ್ತಿದ್ದರು. ಹಾಗೆಯೇ ನಡೆದುಕೊಳ್ಳುತ್ತಿದ್ದರು.

ಇವತ್ತು ಧರ್ಮವನ್ನು ರಾಜಕೀಯಕ್ಕೆ ಎಳೆದು ತರುತ್ತಿರುವ ನಾಯಕರಿಗೆ ಗಾಂಧೀಜಿಯವರ ಈ ನಿಲುವು ಮತ್ತು ನೋಟಗಳು ಅರ್ಥವಾಗಬೇಕು. ಇಲ್ಲವಾದರೆ ಮುಂದೊಮ್ಮೆ ಧಾರ್ಮಿಕ ಸಂಘರ್ಷಗಳ ಆರ್ಭಟದಲ್ಲಿ ನಮ್ಮ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಉಳಿಯುವುದು ಕಷ್ಟ.

೧೧,ನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುವ ಸಹಾಯವಾಣಿ ಕನ್ನಡ ದಿನಪತ್ರಿಕೆಯ ಬೆಳವಣಿಗೆಗೆ ಸಹಾಯ,ಸಹಕಾರ,ಪ್ರೋತ್ಸಾಹ ನೀಡಿರುವ ಓದುಗರಿಗೆ ಹಾಗೂ ಅಭಿಮಾನಿಗಳಿಗೆ ತುಂಬು ಹೃದಯದ ಅಭಿನಂದನೆಗಳು ಮುಂದೆಯೂ ಹೆಚ್ಚಿನ ರೀತಿಯು ಸಹಕಾರವನ್ನು ಬಯುಸುತ್ತಾ ಮತ್ತೊಮ್ಮೆ ಅಭಿನಂದನೆಗಳು;ಎಸ್.ಕೆ.ಒಡೆಯರ್ ಸಂಪದಕರು.

ಸಹಾಯವಾಣಿ



ಭಾರತದ ಸಂವಿಧಾನ

ಪೀಠಿಕೆ

ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು
ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ.

## ಭಾರತದ ಸಂವಿಧಾನದ ಚೌಕಟ್ಟಿನಲ್ಲಿ ಪರಿಸರ ಸಂರಕ್ಷಣೆ–ಮಮತಾ ಅರಸೀಕೆರೆ


ಬೆಂಗಳೂರು ನಗರ ಜಿಲ್ಲೆ, ಫೆ ೧೪ :ಭಾರತದ ಸಂವಿಧಾನವು ಜಡವಾಗಿಲ್ಲ, ಅದು ಕಾಲಾನಂತರದಲ್ಲಿ ವಿಕಸನಗೊಂಡು ಬೆಳೆಯುತ್ತಲೇ ಇರುವ ಜೀವಂತ ದಾಖಲೆಯಾಗಿದೆ. ಸಂವಿಧಾನದಲ್ಲಿನ ಪರಿಸರ ಸಂರಕ್ಷಣೆಯ ನಿರ್ದಿಷ್ಟ ನಿಬಂಧನೆಗಳು ಸಹ ಭೂಮಿಯ ವಿಕಾಸದ ಸ್ವಭಾವ ಮತ್ತು ಬೆಳವಣಿಗೆಯ ಸಾಮರ್ಥ್ಯದ ಮೂಲಭೂತ ಕಾನೂನಿನ ಫಲಿತಾಂಶವಾಗಿದೆ. ನಮ್ಮ ಸಂವಿಧಾನದ ಪೀಠಿಕೆಯು ಸಾಮಾಜಿಕವಾಗಿ ಸಮಾಜವಾದದ ಮಾದರಿ ಮತ್ತು ವ್ಯಕ್ತಿಯ ಘನತೆಯನ್ನು ಖಾತ್ರಿಗೊಳಿಸುತ್ತದೆ. ಯೋಗ್ಯ ಜೀವನ ಮಟ್ಟ ಮತ್ತು ಮಾಲಿನ್ಯ ಮುಕ್ತ ಪರಿಸರ ಇದರಲ್ಲಿ ಅಂತರ್ಗತವಾಗಿರುತ್ತದೆ. ಪರಿಸರ (ರಕ್ಷಣೆ) ಕಾಯಿದೆ ೧೯೮೬, ಪರಿಸರವನ್ನು ಹೀಗೆ ವ್ಯಾಖ್ಯಾನಿಸುತ್ತದೆ. 'ಪರಿಸರವು ನೀರು, ಗಾಳಿ ಮತ್ತು ಭೂಮಿಯನ್ನೊಳಗೊಂಡಿದೆ, ಮನುಷ್ಯರ ನಡುವೆ ಹಾಗೂ ಇತರ ಜೀವಿಗಳ ನಡುವೆ ಇರುವ ಅಂತರ್ಗತ ಸಂಬಂಧ, ಉಳಿದ ಸಸ್ಯಗಳು, ಸೂಕ್ಷ್ಮ ಜೀವಿಗಳ ನಡುವೆ ಇರುವ ಪರಸ್ಪರ ಸಂಬಂಧವನ್ನು ಒಳಗೊಂಡಿದೆ".

ಭಾರತೀಯ ಸಂವಿಧಾನದ ಮೂಲಭೂತ ಕರ್ತವ್ಯಗಳ ಅಧ್ಯಾಯವು, ಪರಿಸರವನ್ನು ರಕ್ಷಿಸಲು ಪ್ರತಿಯೊಬ್ಬ ನಾಗರಿಕನ ಕರ್ತವ್ಯಗಳನ್ನು ಸ್ಪಷ್ಟಪಡಿಸಿದೆ. ಆರ್ಟಿಕಲ್ ೫೧–ಎ (ಜಿ), "ಕಾಡುಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ರಕ್ಷಿಸುವುದು ಮತ್ತು ಸುಧಾರಿಸುವುದು ಹಾಗೂ ಜೀವಂತ ಜೀವಿಗಳ ಬಗ್ಗೆ ಸಹಾನುಭೂತಿ ಹೊಂದುವುದು ಭಾರತದ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ" ಎಂದು ಹೇಳುತ್ತದೆ.

ಭಾರತೀಯ ಸಂವಿಧಾನದ ಅಡಿಯಲ್ಲಿ, ಕಲ್ಯಾಣ ರಾಜ್ಯವನ್ನು ನಿರ್ಮಿಸುವ ಆದರ್ಶಗಳನ್ನು ನಿರ್ದೇಶಕ ತತ್ವಗಳು ನಿರ್ದೇಶಿಸುತ್ತವೆ. ಕಲ್ಯಾಣ ರಾಜ್ಯದ ಅಂಶಗಳಲ್ಲಿ ಆರೋಗ್ಯಕರ ಪರಿಸರವೂ ಒಂದು. ೪೭ ನೇ ವಿಧಿಯು, ರಾಜ್ಯವು ತನ್ನ ಜನರ ಪೋಷಣೆಯ ಮಟ್ಟ ಮತ್ತು ಜೀವನ ಶೈಲಿಯನ್ನು ಹೆಚ್ಚಿಸುವುದು ಹಾಗೂ ಸಾರ್ವಜನಿಕ ಆರೋಗ್ಯದ ಸುಧಾರಣೆಯನ್ನು ತನ್ನ ಪ್ರಾಥಮಿಕ ಕರ್ತವ್ಯಗಳೆಂದು ಪರಿಗಣಿಸುತ್ತದೆ ಎಂಬುದಾಗಿ ಹೇಳುತ್ತದೆ. ಸಾರ್ವಜನಿಕ ಸ್ವಾಸ್ಥ್ಯ ಸುಧಾರಣೆಯು ಪರಿಸರದ ರಕ್ಷಣೆ ಮತ್ತು ಸುಧಾರಣೆಯನ್ನು ಒಳಗೊಂಡಿರುತ್ತದೆ, ಅದಿಲ್ಲದೆ ಸಾರ್ವಜನಿಕ ಆರೋಗ್ಯ ಕ್ಷೇತ್ರವನ್ನು ಸುಧಾರಣೆ ಮಾಡಲಾಗುವುದಿಲ್ಲ. ಆರ್ಟಿಕಲ್ ೪೮ ಕೃಷಿ ಮತ್ತು ಪಶುಸಂಗೋಪನೆಯ ವ್ಯವಸ್ಥೆಗೆ ಸಂಬಂಧಿಸಿದ್ದಾಗಿದೆ. ಆಧುನಿಕ ಮತ್ತು ವೈಜ್ಞಾನಿಕ ಮಾರ್ಗಗಳಲ್ಲಿ ಕೃಷಿ ಮತ್ತು ಪಶುಸಂಗೋಪನೆಯನ್ನು ಸಂಘಟಿಸಲು ಕ್ರಮಗಳನ್ನು ತೆಗೆದುಕೊಳ್ಳುವಂತೆ ಈ ಅನುಚ್ಛೇದವು ರಾಜ್ಯವನ್ನು ನಿರ್ದೇಶಿಸುತ್ತದೆ. ನಿರ್ದಿಷ್ಟವಾಗಿ ಹೇಳುವುದಾದರೆ, ತಳಿಗಳನ್ನು ಸಂರಕ್ಷಿಸುವುದು, ಸುಧಾರಿಸುವ ಕ್ರಮಗಳನ್ನು ತೆಗೆದುಕೊಳ್ಳುವುದು ಕೂಡ ಸೇರಿದೆ. ಸಂವಿಧಾನದ ೪೮–ಎ ಪ್ರಕಾರ "ಪ್ರಭುತ್ವವು ಪರಿಸರವನ್ನು ರಕ್ಷಿಸಲು ಮತ್ತು ಸುಧಾರಿಸಲು, ದೇಶದ ಅರಣ್ಯ ಹಾಗೂ ವನ್ಯಜೀವಿ ಸಂಪತ್ತು ಗಳನ್ನು ರಕ್ಷಿಸಲು ಪ್ರಯತ್ನಿಸುತ್ತದೆ" ಎಂದು ಹೇಳುತ್ತದೆ.

ಭಾಗ ೩ ರ ಅಡಿಯಲ್ಲಿ ಭಾರತದ ಸಂವಿಧಾನವು ಪ್ರತಿಯೊಬ್ಬ ವ್ಯಕ್ತಿಯ ಅಭಿವೃದ್ಧಿಗೆ ಮತ್ತು ಮನುಷ್ಯನಿಗೆ ಬೇಕಾಗುವ ಕನಿಷ್ಠ ಸವಲತ್ತುಗಳನ್ನು ಒದಗಿಸಲು ಅತ್ಯಗತ್ಯವಾಗಿರುವ ಅಂಶಗಳನ್ನು, ಮೂಲಭೂತ ಹಕ್ಕುಗಳನ್ನು ಖಾತರಿಪಡಿಸುತ್ತದೆ. ಪರಿಸರದ ಹಕ್ಕು ಕೂಡ ಒಂದು ಹಕ್ಕಾಗಿದೆ, ಅದಿಲ್ಲದೆ ವ್ಯಕ್ತಿಯ ಅಭಿವೃದ್ಧಿ ಮತ್ತು ಅವನ ಅಥವಾ ಅವಳ ಸಂಪೂರ್ಣ ಸಾಮರ್ಥ್ಯವನ್ನು ಅರಿತುಕೊಳ್ಳುವುದು ಸಾಧ್ಯವಿಲ್ಲ. ಈ ಭಾಗದ ೨೧, ೧೪ ಮತ್ತು ೧೯ನೇ ವಿಧಿಗಳನ್ನು ಪರಿಸರ ಸಂರಕ್ಷಣೆಗಾಗಿ ಬಳಸಿಕೊಳ್ಳಲಾಗಿದೆ.

ಸಂವಿಧಾನದ ೨೧ ನೇ ವಿಧಿಯ ಪ್ರಕಾರ, "ಕಾನೂನಿನ ಅಡಿಯಲ್ಲಿ ಸ್ಥಾಪಿತವಾದ ಕಾರ್ಯವಿಧಾನವನ್ನು ಹೊರತುಪಡಿಸಿ ಯಾವುದೇ ವ್ಯಕ್ತಿ ತನ್ನ ಜೀವನ ಅಥವಾ ವೈಯಕ್ತಿಕ ಸ್ವಾತಂತ್ರ್ಯದಿಂದ ವಂಚಿತನಾಗಬಾರದು", ಪರಿಚ್ಛೇಧ ೨೧ ಬದುಕುವ ಮೂಲಭೂತ ಹಕ್ಕನ್ನು ಖಾತರಿಪಡಿಸುತ್ತದೆ




## ಜನಪ್ರತಿನಿಧಿಗಳು ಸಂವಿಧಾನದ ಆಶಯಗಳನ್ನು ಅರ್ಥ ಮಾಡಿಕೊಂಡಿದ್ದರೆ ನಮ್ಮ ದೇಶ ಕಲ್ಯಾಣ ನಾಡಾಗುತ್ತಿತ್ತು;ಪಂಡಿತಾರಾಧ್ಯ ಶ್ರೀ



ಸಾಣೇಹಳ್ಳಿ ಫೆಬ್ರವರಿ ೧೩; ನಮ್ಮ ಜನಪ್ರತಿನಿಧಿಗಳು ಸಂವಿಧಾನದ ಆಶಯಗಳನ್ನು ಅರ್ಥ ಮಾಡಿಕೊಂಡಿದ್ದರೆ ನಮ್ಮ ದೇಶ ಕಲ್ಯಾಣ ನಾಡಾಗುತ್ತಿತ್ತು. ನಮ್ಮ ಜನರ ಸಂಕಷ್ಟಗಳನ್ನು ಬಗೆಹರಿಸಬಹುದಾಗಿತ್ತು. ಆದರೆ ಸಂವಿಧಾನ ರಚನೆ ಆಗಿ ೭೫ ವರ್ಷಗಳಾದರೂ ಇನ್ನೂ ನಮ್ಮ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯಾಗದೇ ಇರುವುದು ವಿಷಾದದ ಸಂಗತಿ ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಹೇಳಿದರು.

ಸಂವಿಧಾನ ಜಾಗೃತ ಜಾಥಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿ; ಸಂವಿಧಾನ ಜಾರಿಗೆ ಬಂದು ೭೫ ವರ್ಷಗಳಾದವು. ೭೫ ವರ್ಷಗಳ ಸಿಂಹಾವಲೋಕನ ಮಾಡಿದರೆ ನಮ್ಮ ಸಂವಿಧಾನಕ್ಕೆ ಅನುಗುಣವಾಗಿ ನಮ್ಮ ರಾಜಕೀಯ ನೇತಾರರು, ಜನಪ್ರತಿನಿಧಿಗಳು ನಡೆದುಕೊಳ್ಳುತ್ತಿದ್ದಾರೆಯೇ ಎಂದು ಪ್ರಶ್ನೆ ಹಾಕಿದರೆ ಉತ್ತರ ಹೇಳೋದು ತುಂಬಾ ಕಷ್ಟ.

ನಾವು ಆಯ್ಕೆ ಮಾಡಿ ಕಳಿಸುವಂಥ ಜನಪ್ರತಿನಿಧಿಗಳಿಗೆ ಸಂವಿಧಾನದ ಪರಿಚಯವೇ ಬಹುತೇಕ ಜನರಿಗೆ ಇಲ್ಲ. ಇಡೀ ಸಂವಿಧಾನವನ್ನು ಓದಿಕೊಂಡ ಜನಪ್ರತಿನಿಧಿಗಳು ಬೆರಳೆಣಿಕೆಯಷ್ಟು ಮಾತ್ರ. ಜನಪ್ರನಿಧಿಯಾಗಲಿಕ್ಕೆ ಅರ್ಹತೆ ಇರಬೇಕು. ಅದರ ಬದಲಾಗಿ ಈಗ ಪ್ರಧಾನವಾಗಿರುವುದು ಜಾತಿ, ಹಣ, ಅಧಿಕಾರ. ಹಾಗಾಗಿ ಅವಿದ್ಯಾವಂತರು ಕೂಡ ನಮ್ಮ ಜನಪ್ರತಿನಿಧಿಗಳಾಗಿರುವ ನದರ್ಶನಗಳು ಬೇಕಾದಷ್ಟಿವೆ. ಅವಿದ್ಯಾವಂತರು ಜನಪ್ರನಿಧಿಗಳಾದಾಗ ಹೇಗೆ ನಮ್ಮ ಸಂವಿಧಾನವನ್ನು ಅಧ್ಯಯನ ಮಾಡಲಿಕ್ಕೆ ಸಾಧ್ಯ. ನಮ್ಮ ಹಕ್ಕು, ಕರ್ತವ್ಯ, ಜವಾಬ್ದಾರಿಗಳೇನು, ಆಡಳಿತ ನಿರ್ವಹಿಸುವಾಗ ಹೇಗೆ ನಾವು ವರ್ತನೆ ಮಾಡಬೇಕು ಎನ್ನುವ ಅಂಶಗಳು ಪರಿಚಯವಿರದೇ ಮನಸ್ಸಿಗೆ ಬಂದ ಹಾಗೆ ನಡೆದುಕೊಳ್ಳುತ್ತಿದ್ದಾರೆ. ರೈತರ ಬೇಡಿಕೆಗಳು ಈಡೇರಿಲ್ಲ. ಹರಿಯಾಣ, ಪಂಜಾಬ್ ರಾಜ್ಯದ ಭಾಗದ ರೈತರು ನಮಗೆ ಬೆಂಬಲ ಬೆಲೆಯನ್ನು ಕೊಡಿ ನಮ್ಮ ಆಶಯಗಳನ್ನು ಈಡೇರಿಸಿ ಎಂದು ಬಹುದೊಡ್ಡ ಹೋರಾಟಕ್ಕೆ ಸನ್ನದ್ಧರಾಗಿ ಬಂದರೆ ಆ ಹೋರಾಟವನ್ನು ತಡೆಗಟ್ಟಲಿಕ್ಕೆ ಏನು ಬೇಕೋ ಆ ವ್ಯವಸ್ಥೆಯನ್ನು ಸರಕಾರ ಮಾಡಿತು. ಇದು ಪ್ರಜಾಪ್ರಭುತ್ವದ ಸೋಲು. ಹಾಗಾಗಿ ಪ್ರಜೆಗಳು ಯೋಗ್ಯ ಜನಪ್ರತಿನಿಧಿಯನ್ನು ಆಯ್ಕೆ ಮಾಡಿದರೆ ಒಳ್ಳೆಯ ಆಡಳಿತವನ್ನು ಕೊಡಲಿಕ್ಕೆ ಸಾಧ್ಯ. ಆದರ್ಶ ಜನಪ್ರತಿನಿಧಿ ಇಲ್ಲದಿದ್ದರೆ ಆದರ್ಶ ರಾಜ್ಯವೂ ಇಲ್ಲ.

ಸಂವಿಧಾನದ ಜಾಗೃತ ಅಭಿಯಾನ ಎಲ್ಲ ಅಭಿಯಾನದಂತೆ ಆಗಬಾರದು. ಈ ಅಭಿಯಾನದ ಮೂಲಕ ಗ್ರಾಮ ಪಂಚಾಯಿತಿಯವರು, ವಿದ್ಯಾರ್ಥಿಗಳು, ಸಾರ್ವಜನಿಕರು ಸ್ವಲ್ಪಮಟ್ಟಿಗಾದರೂ ಸಂವಿಧಾನದ ಆಶಯುಗಳನ್ನು ಅರ್ಥಮಾಡಿಕೊಂಡರೆ ಚುನಾವಣೆಗಳಲ್ಲಿ ಇದ್ದವರಲ್ಲೇ ಯೋಗ್ಯರನ್ನು ಆಯ್ಕೆ ಮಾಡಲಿಕ್ಕೆ ಅವಕಾಶವಾಗುವುದು. ಸಂವಿಧಾನದ ಆಶಯುಗಳಿಗೆ ಧಕ್ಕೆ ಬಾರದ ಹಾಗೆ ನಡೆದುಕೊಳ್ಳಬೇಕು. ಸಂವಿಧಾನದ ಆಶಯಗಳನ್ನು ೧೨ನೆಯ ಶತಮಾನದಲ್ಲೇ ಜಾರಿಗೆ ತಂದಿದ್ದರು. ಕರ್ನಾಟಕ ಸರಕಾರ ವಿಶ್ವಗುರು ಬಸವಣ್ಣ ಸಾಂಸ್ಕೃತಿಕ ನಾಯಕ ಅಂತ ಒಂದು ನಿರ್ಣಯ ಮಾಡಿದೆ. ಸಾಂಸ್ಕೃತಿಕ ನಾಯಕನ ಭಾವಚಿತ್ರವನ್ನು ಎಲ್ಲ ಶಾಲಾ, ಕಾಲೇಜು, ಸರಕಾರಿ ಆಡಳಿತ ಕಛೇರಿ, ಮಠ ಮಂದಿರಗಳಲಿ ಹಾಕಬೇಕು ಎನ್ನುವ ನಿರ್ಣಯವನ್ನು ಸರಕಾರಿ ಮಾಡಿರುವಂಥದ್ದು ಅಭಿನಂದನಾರ್ಹ. ಬಸವಣ್ಣ ಅಂದಾಕ್ಷಣ ಕಿರೀಟ ಬಸವಣ್ಣ ಅಂತ ಹೇಳ್ತಾರೆ. ಆದರೆ ಬಸವಣ್ಣನವರಿಗೆ ಕಿರೀಟದ ಬಗ್ಗೆ ವ್ಯಾಮೋಹ ಇರಲಿಲ್ಲ.

ಸರಕಾರ ತುಂಬಾ ಯೋಚನೆ ಮಾಡಿ ತಾಳೆಗರಿಯಲ್ಲಿ ಬರೆಯುವಂಥ ಬಸವಣ್ಣನ ಭಾವಚಿತ್ರವನ್ನು ಹಾಕಬೇಕೆಂದು ಜಾರಿಯಲ್ಲಿ ತಂದಿದೆ. ಹಾಗಾಗಿ ೧೭ ನೆಯ ತಾರೀಖು ಅದೊಂದು ಸಂಭ್ರಮದ ದಿನಾಚರಣೆ ಆಗಬೇಕು. ಅವತ್ತು ಬಸವಣ್ಣನವರ ವಚನ ಓದುವುದು, ಚರ್ಚೆ ಮಾಡುವುದು, ಬಸವತತ್ವವನ್ನು ತಿಳಿದುಕೊಳ್ಳುವ ಕೆಲಸ ಆಗಬೇಕು. ಸಾಣೇಹಳ್ಳಿಯ ಮಠದಲ್ಲೂ ದಿನಾಂಕ ೧೭ ರಂದು ವಿಶ್ವಗುರು ಬಸವಣ್ಣ ಸಾಂಸ್ಕೃತಿಕ ನಾಯಕನ ಭಾವಚಿತ್ರವಿಟ್ಟು ಅದಕ್ಕೆ ಪುಷ್ಪವನ್ನು ಅರ್ಪಿಸಿ ವಚನಗಳನ್ನು ಓದಿ ಕಾರ್ಯಕ್ರಮ ನಡೆಸಲಾಗುವುದು ಎಂದರು.

ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಶಶಿಧರ ಪ್ರಸ್ತಾವಿಕವಾಗಿ ಮಾತನಾಡಿದರು. ಉಪನ್ಯಾಸಕ ಕಾಂತರಾಜ್ ಸಂವಿಧಾನದ ಬಗ್ಗೆ ಮತನಾಡಿದರು. ವೇದಿಕೆಯ ಮೇಲೆ ತಾಲ್ಲೂಕು ನೌಕರರ ಸಂಘದ ಅಧ್ಯಕ್ಷ ಗಂಗಾಧರ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪ್ರೇಮ ಬಸವರಾಜ್, ಪಿಡಿಓ ಸ್ವಾಮಿ ಮತ್ತಿತರರಿದ್ದರು. ನಿವೃತ್ತ ಶಿಕ್ಷಕ ವೀರಭದ್ರಪ್ಪ ಸ್ವಾಗತಿಸಿದರೆ ಮಲ್ಲಿಕಾರ್ಜುನ್ ನಿರೂಪಿಸಿ ವಂದಿಸಿದರು.

**Printed by**;S.K.Wadeyar,#378/379, "MAYAGAPPA COMPLEX" 1st Stage 6th Phase Industrial Town west of chord Road Rajajinagar Bengaluru-560044.Karnataka.
**Published by**;S.K.Wadeyar,#378/379, "MAYAGAPPA COMPLEX" 1st Stage 6th Phase Industrial Town west of chord Road Rajajinagar Bengaluru-560044.Karnataka.
**Owned by**;S.K.Wadeyar,#378/379, "MAYAGAPPA COMPLEX" 1st Stage 6th Phase Industrial Town west of chord Road Rajajinagar Bengaluru-560044.Karnataka.
**Printed at;SUCHITHRA PRINTER's & PUBLISHER's**,#378/379, "MAYAGAPPA COMPLEX" 1se Stage 6th Phase Industrial Town west of chord Road Rajajinagar Bengaluru-560044.Karnataka.
**Editor**;S.K.Wadeyar,#378/379, "MAYAGAPPA COMPLEX" 1st Stage 6th Phase Industrial Town west of chord Road Rajajinagar Bengaluru-560044.Karnataka.